ಸಂಪುಟ 01 | ಸಂಚಿಕೆ 173 | ಭಾನುವಾರ 17 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ದೂರಸಂಪರ್ಕ ದಿನ**

ಪ್ರತಿ ವರ್ಷ ಮೇ 17 ರಂದು ವಿಶ್ವ ದೂರಸಂಪರ್ಕ ದಿನವನ್ನು ಆಚರಿಸಲಾಗುತ್ತದೆ. 1865 ರ ಮೇ 17 ರಂದು ಪ್ಯಾರಿಸ್‌ನಲ್ಲಿ ಮೊದಲ ಅಂತರರಾಷ್ಟ್ರೀಯ ಟೆಲಿಗ್ರಾಫ್ ಸಮಾವೇಶಕ್ಕೆ ಸಹಿ ಹಾಕಿದಾಗ ಐಟಿಯು ಸ್ಥಾಪನೆಯಾದ ದಿನವನ್ನು ಇದು ಗುರುತಿಸುತ್ತದೆ. ಇದನ್ನು ವಿಶ್ವ ದೂರಸಂಪರ್ಕ ಮತ್ತು ಅಂತರರಾಷ್ಟ್ರೀಯ ಸಮಾಜ ದಿನ ಎಂದೂ ಕರೆಯಲಾಗುತ್ತದೆ. 1969 ರಿಂದ, ಇದನ್ನು ವಾರ್ಷಿಕವಾಗಿ ಆಚರಿಸಲಾಗುತ್ತದೆ.

**2) ವಿಶ್ವ ಅಧಿಕ ರಕ್ತದೊತ್ತಡ ದಿನ**

ಈ ದಿನವನ್ನು ಪ್ರತಿ ವರ್ಷ ಮೇ 17 ರಂದು ವಿಶ್ವ ಅಧಿಕ ರಕ್ತದೊತ್ತಡ ಲೀಗ್ (ಡಬ್ಲ್ಯುಎಚ್ಎಲ್) ಆಚರಿಸುತ್ತದೆ. ಈ ದಿನವು ಅಧಿಕ ರಕ್ತದೊತ್ತಡದ ಬಗ್ಗೆ ಜಾಗೃತಿ ಮೂಡಿಸುತ್ತದೆ ಮತ್ತು ಈ ಮೂಕ ಕೊಲೆಗಾರ ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಮತ್ತು ನಿಯಂತ್ರಿಸಲು ಜನರನ್ನು ಪ್ರೋತ್ಸಾಹಿಸುತ್ತದೆ.

## ಸುಭಾಷಿತ

ಮನುಷ್ಯ ಬಾಳಬೇಕಾಗಿರುವುದು
ದ್ವೇಷಕ್ಕಾಗಿ ಅಲ್ಲ, ವಿನಾಶಕ್ಕಾಗಿ ಅಲ್ಲ;
ಬದುಕಿಗಾಗಿ ಮತ್ತು ಶಾಂತಿಗಾಗಿ.

–ಎಸ್.ರಾಧಾಕೃಷ್ಣನ್

## ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ

### ನೈತಿಕ ಹೊಣೆ ಹೊತ್ತು ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಲಿ : ಸಿಎಂ ಸಿದ್ದರಾಮಯ್ಯ

**ಬೆಂಗಳೂರು:** ನೀಟ್-ಯುಜಿ 2026 ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣವನ್ನು ತೀವ್ರವಾಗಿ ಖಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೇಂದ್ರ ಸರ್ಕಾರ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದ್ದಾರೆ. ಇದೇ ವೇಳೆ ಈ ಪ್ರಕರಣದ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಕ್ಷಣ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಸಿದ್ದರಾಮಯ್ಯ ಅವರು, ದೇಶಾದ್ಯಂತ 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಬರೆದಿದ್ದ ಒಇಇಖಿ-ಗಲು 2026 ಪರೀಕ್ಷೆಯನ್ನು ರದ್ದುಗೊಳಿಸಿರುವುದು ಕೇವಲ ಆಡಳಿತ ವೈಫಲ್ಯವಲ್ಲ, ಯುವಜನತೆಗೆ ಮಾಡಿದ ದ್ರೋಹವಾಗಿದೆ ಎಂದು ಕಿಡಿಕಾರಿದ್ದಾರೆ. ಕರ್ನಾಟಕ ರಾಜ್ಯ ಒಂದರಿಂದಲೇ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಪರೀಕ್ಷೆಗೆ



ಹಾಜರಾಗಿದ್ದರು. ತಿಂಗಳಗಟ್ಟಲೆ ಕಷ್ಟಪಟ್ಟು ಓದಿ ಪರೀಕ್ಷೆಗೆ ಸಿದ್ಧತೆ ಮಾಡಿಕೊಂಡಿದ್ದರು. ಅವರ ಪೋಷಕರು ಕೋಚಿಂಗ್, ಪ್ರಯಾಣ ಹಾಗೂ ಇತರ ಸೌಲಭ್ಯಗಳಿಗಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದಾರೆ. ಈಗ ಪರೀಕ್ಷೆ ರದ್ದುಪಡಿಸಿರುವುದರಿಂದ ವಿದ್ಯಾರ್ಥಿಗಳು ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದಾರೆ ಎಂದು ಹೇಳಿದ್ದಾರೆ.

ಇದೇ ವೇಳೆ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಕುರಿತು ಪಾರದರ್ಶಕ ಹಾಗೂ ನಿಗದಿತ ಅವಧಿಯೊಳಗಿನ ತನಿಖೆ ನಡೆಸಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆಯಾಗದಂತೆ ಹೊಸ ಪರೀಕ್ಷಾ ವೇಳಾಪಟ್ಟಿಯನ್ನು ತಕ್ಷಣ ಘೋಷಿಸಬೇಕು ಎಂದು ಆಗ್ರಹಿಸಿದ್ದಾರೆ. ಇದೇ ವೇಳೆ ಪ್ರವೇಶ ಪರೀಕ್ಷೆಗಳನ್ನು ನಡೆಸುವ ಅಧಿಕಾರವನ್ನು ಮತ್ತೆ ರಾಜ್ಯಗಳಿಗೆ ಹಿಂತಿರುಗಿಸಬೇಕು ಎಂದು ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ. ರಾಷ್ಟ್ರೀಯ ಮಟ್ಟದ ಪರೀಕ್ಷೆಗಳ ನಿರ್ವಹಣೆಯಲ್ಲಿ ಪದೇಪದೇ ಕಾಣಿಸುತ್ತಿರುವ ಲೋಪಗಳು ವಿದ್ಯಾರ್ಥಿಗಳ ಭವಿಷ್ಯವನ್ನು ಸಂಕಷ್ಟಕ್ಕೆ ತಳ್ಳುತ್ತಿವೆ ಎಂದು ಆರೋಪಿಸಿದ್ದಾರೆ.

## ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಯಿಂದ ಗೃಹ ಲಕ್ಷ್ಮೀ ಸಮಾವೇಶದ ಪೂರ್ವ ಬಾವಿ ಸಭೆ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು:** ತಾಲೂಕಮಟ್ಟದಗ್ಯಾರೆಂಟಿಯೋಜನೆಗಳಅನುಷ್ಠಾನ ಸಮಿತಿಯ ವತಿಯಿಂದ ಗೃಹಲಕ್ಷ್ಮಿ ಸಮಾವೇಶ ಹಮ್ಮಿಕೊಳ್ಳುವ ಪೂರ್ವಭಾವಿ ಸಭೆಯನ್ನು ಇಂದು ತಾಲೂಕು ಪಂಚಾಯತ್ ಸಭಾಂಗಣ ದಲ್ಲಿ ಅಧ್ಯಕ್ಷರು ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.





ಈ ಸಭೆಯಲ್ಲಿ ತಾಲೂಕು ಗ್ಯಾರಂಟಿ ಯೋಜನೆ ತಾಲೂಕಿನ ಎಲ್ಲಾ ಸದಸ್ಯರು, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ್ , ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ , ಸಾರಿಗೆ ಇಲಾಖೆಯ ಅಧಿಕಾರಿ, ಆಹಾರ ಇಲಾಖೆಯ ಅಧಿಕಾರಿ, ಅಂಗನವಾಡಿ ಮೇಲ್ವಿಚಾರಕರು ಹಾಗೂ ತಾಲೂಕು ಪಂಚಾಯತ್ ಸಿಬ್ಬಂದಿಗಳು ಹಾಜರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಸ್ವಂತ ಖರ್ಚಿನಲ್ಲಿ ಶುರು ಒದಗಿಸಿ,ಮಾನವೀಯತೆ ಮರೆದ ಭೀಮಣ್ಣ ನಾಯಕ ಕಾಚಾಪೂರ



❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ:** ತಾಲ್ಲೂಕಿನ ತುಗ್ಗಲದಿನ್ನಿ ಗ್ರಾಮದ ರಂಗಮ್ಮ ಅಜ್ಜಿ ಶುರುಲ್ಲದ ಮನೆಯಲ್ಲಿ ವಾಸಮಡುವ ಸುದ್ದಿಯನ್ನು ಹದಿನೈದು ದಿನಗಳ ಹಿಂದೆ ಪ್ರಸಾರ ಮಾಡಲಾಗಿತ್ತು,ನಂತರ ಸ್ಥಳೀಯ ಜನಪ್ರತಿನಿದಿಗಳು,ಅಧಿಕಾರಿಗಳು, ಮುಖಂಡರು ಸುದ್ದಿ ಬೆನ್ನಲೆ ಶುರು ಒದಗಿಸುವ ಭರವಸೆ ಕೊಟ್ಟರು, ಆದರೆ ರಂಗಮ್ಮ ಅಜ್ಜಿಯು ಬಿರುಬಿಸಲುನಿಂದ ಅಜ್ಜಿ ಆರೋಗ್ಯ ತೀರಾ ಹದೆಗಟ್ಟಿತ್ತು,

ಆಗ ಸುದ್ದಿ ಅರಿತ ಭೀಮಣ್ಣ ನಾಯಕ ಕಾಚಾಪೂರ ಏಕಾಏಕಿ ತುಗ್ಗಲದಿನ್ನಿ ಅಜ್ಜಿ ಮನೆಗೆ ಭೇಟಿ ನೀಡಿ,ಗ್ರಾಮಸ್ಥರೊಂದಿಗೆ ಚರ್ಚಿಸಿ,ಮನೆಯ ನಿರ್ಮಾಣ ಚಟುವಟಿಕೆ ತ್ವರಿತಗತಿಯಲ್ಲಿ ಕೆಲಸ ಮಾಡಿ, ವರದೊಳಗಡೆನೆ ಸ್ವಂತ ಹಣ ಖರ್ಚು ಮಾಡಿ ಮನೆ ನಿರ್ಮಿಸಿ, ಬುದ್ದ ಬಸವ ಅಂಬೇಡ್ಕರ್, ಹಾಗೂ ಮಹರ್ಷಿ ವಾಲ್ಮೀಕಿ ಪೊಟೊದೊಂದಿಗೆ ತೊರಳ ತೊರಣ ಕಟ್ಟಿ, ಪೂಜೆಯೊಂದಿಗೆ, ಹಾಲು ಉಕ್ಕಿಸಿ ನೂರಾರು ಗ್ರಾಮಸ್ಥರೊಂದಿಗೆ ಊಟ ಉಣಬಡಿಸಿ ರಂಗಮ್ಮ ಅಜ್ಜಿಗೆ ಮನೆ ಒಪ್ಪಿಸಿ ಮಾನವೀಯತೆಗೆ ಸಾಕ್ಷಿಯಾಗಿ,

ನೆರದ ಜನರು ಪ್ರೀತಿಯಿಂದ ಭೀಮಣ್ಣ ನಾಯಕ ಕಾಚಾಪೂರ ಅವರನ್ನು ಗೌರವಿಸಿ ಸನ್ಮಾನಿಸಿದ ಕ್ಷಣ ಅಪರೂಪ.ಆಗ ಅಜ್ಜಿ ಭಿಮಣ್ಣ ನಾಯಕ ಕಾರ್ಯ ಮೆಚ್ಚಿ ಮಾತನಾಡಿ ನೀನು ನೂರು ಕಾಲ ಸುಖವಾಗಿ ಬದುಕಿ ಬಾಳಪ ಎಂದು ಹೇಳಿದ ಮಾತು ನೋಡುಗರು ಹರ್ಷರಾದರು.

## ಗುಳೆ ಹೋಗುವುದನ್ನು ತಪ್ಪಿಸುವ ಉದ್ದೇಶವೇ ಈ ನರೇಗಾ ಯೋಜನೆ ಜಾರಿ: ಇಒ ಚಂದ್ರಶೇಖರ

❑ ನೈಜ್ಯ ದೆಸೆ ನ್ಯೂಸ್

ಸ್ಥಳೀಯ ಕೂಲಿ ಕಾರ್ಮಿಕರ ಗುಳೆ ಹೋಗುವುದನ್ನು ತಪ್ಪಿಸುವ ಉದ್ದೇಶದಿಂದ ನರೇಗಾ ಯೋಜನೆಯನ್ನು ಜಾರಿಗೊಳಿಸಿದ್ದು, ಅಳತೆ ಅನುಸಾರ ಕೆಲಸ ನಿರ್ವಹಿಸಿ, ಸಂಪೂರ್ಣ ಕೂಲಿ ಪಡೆದು, ಕಾರ್ಮಿಕರು ಆರ್ಥಿಕವಾಗಿ ಸದೃಢರಾಗಬೇಕೆಂದು ತಾಲೂಕು ಕಾರ್ಯನಿರ್ವಾಹಕ ಚಂದ್ರಶೇಖರ ಹೇಳಿದರು.

ತಾಲೂಕಿನ ಸಾಲಗುಂದ ಗ್ರಾ.ಪಂಗೆ ವ್ಯಾಪ್ತಿಗೆ ಬರುವ ಗುಬ್ಬಿ ಗುಡ್ಡದ ಹತ್ತಿರ ಗೋಕಟ್ಟೆ ಕಾಮಗಾರಿಯನ್ನು ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಗೋಕಟ್ಟೆ ಕಾಮಗಾರಿಯಲ್ಲಿ ತೊಡಗಿರುವ ಸಾಲಗುಂದ ಗ್ರಾಮ ಪಂಚಾಯತಿ ಕೂಲಿಕಾರರನ್ನು



ಉದ್ದೇಶಿಸಿ ಮಾತನಾಡಿದರು. ಬಿಸಿಲಿನ ಝಳ ಹೆಚ್ಚುತ್ತಿದ್ದು , ಕಾಮಗಾರಿ ಸ್ಥಳಗಳಲ್ಲಿ ನೆರಳು, ಕುಡಿಯುವ ನೀರು, ಪ್ರಥಮ ಚಿಕಿತ್ಸೆಯ ಕಿಟ್ ಗಳನ್ನು ಗ್ರಾಮ ಪಂಚಾಯತಿ ಕಡೆಯಿಂದ ಒದಗಿಸಲಾಗುತ್ತಿದೆ. ಬಿಸಿಲಿನ ಝಳ ಹೆಚ್ಚುತ್ತಿರುವುದರಿಂದ ಕೂಲಿಕಾರರು ಬೆಳಗಿನ ಜಾವ ಆಗಮಿಸಿದರೆ, ಅನುಕೂಲವಾಗಲಿದೆ.

ಸರ್ಕಾರದ ನಿಯಮ ಅನುಸಾರ ಎನ್‌ಎಮ್‌ಎಮ್‌ಎಸ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ಎರಡು ಬಾರಿ ಕೂಲಿಕಾರರ ಹಾಜರಾತಿಯನ್ನು ದಾಖಲಿಸಬೇಕು. ಹಿರಿಯ ನಾಗರಿಕರು, ಮಹಿಳೆಯರು ಆರೋಗ್ಯದ ಕಡೆ ಗಮನ ಹರಿಸಬೇಕೆಂದು ಹೇಳಿ, ಕೂಲಿಕಾರರು ನಿರ್ವಹಿಸಿದ ಕಾಮಗಾರಿ ವೀಕ್ಷಿಸಿದರು. ಈ ವೇಳೆ: ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ವೀರಭದ್ರಪ್ಪ , ತಾಂತ್ರಿಕ ಸಂಯೋಜಕರಾದ ಶಿವಲಿಂಗಯ್ಯ, ಬಿ.ಎಫ್ಟಿ. ರುದ್ರಯ್ಯ ಗಣಕಯಂತ್ರ ನಿರ್ವಾಹಕರು ತಿಮ್ಮಯ್ಯ, ಮೇಟಿಗಳು ಹಾಗೂ, ಕೂಲಿ ಕಾರ್ಮಿಕರು ಹಾಜರಿದ್ದರು.

## ಲಿಂಗೈಕ್ಯ ಬಸವ ಪ್ರಭು ದೇವರ ಧರ್ಮ ಸೇವೆ ಸ್ಮರಣೀಯ: ಕಸ್ತೂರಿ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ:** ಅಗಲಿದ ಚೇತನ, ಖ್ಯಾತ ಪ್ರವಚನಕಾರ, ವಾಗ್ಮಿ, ಕವಿ, ಲೇಖಕ, ಬಸವಪ್ರಭುದೇವರು ಕೈಲಾಸಪೇಟೆ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಪಟ್ಟಣದ ತಾಲ್ಲೂಕಾ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಗುರುವಾರ ಬೆಳಿಗ್ಗೆ ಶಿವಾಜಿ ಚೌಕದಲ್ಲಿ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ನ್ಯಾಯವಾದಿ ಗಂಗಾಧರ ಕಸ್ತೂರಿ, ತಾಳಿಕೋಟೆ ಪಟ್ಟಣದಲ್ಲಿ ಶರಣಸಾಹಿತ್ಯ ಪರಿಷತ್ತಿನ ಬೆಳವಣಿಗೆಯಲ್ಲಿ ಬಹುತರವಾದ ಕೊಡುಗೆ ನೀಡಿದವರು ಬಸವಪ್ರಭುದೇವರು, ಆಧ್ಯಾತ್ಮ ಮತ್ತು ಅನುಭಾವದ ಮೇರುಶಿಖರವಾಗಿದ್ದರು. ಮೌಢ್ಯಗಳ ವಿರುದ್ದವಾಗಿ ಸದಾ ಚಾಟಿ ಬೀಸುತ್ತಿದ್ದ



ಅವರು, ಸರಳ ನಡೆನುಡಿಗಳಿಂದ ಸಜ್ಜನಿಕೆಯಿಂದ ಎಲ್ಲರ ಮನ ಗೆದ್ದಿದ್ದರು. ಕಾಶಿಗೆ ತೆರಳಿ ವೇದ, ಶಾಸ್ತ್ರ, ಸಂಸ್ಕೃತ ಅಧ್ಯಯನ ಮಾಡಿದ್ದ ಅವರು ಹಲವು ಭಾಷೆಗಳ ಮೇಲೆ ಪಾಂಡಿತ್ಯ ಹೊಂದಿದ್ದರು. ಪುರಾಣ, ಪ್ರವಚನಗಳಲ್ಲಿ ತಮ್ಮ ಹಾಸ್ಯಪೂರಿತ ಮಾತುಗಳಿಂದ ಬದುಕಿನ ಅನುಭಾವವನ್ನು ಜನತೆಗೆ ಹಂಚುತ್ತ ಆಧ್ಯಾತ್ಮದ ಬದುಕನ್ನು ಸರಳೀಕರಿಸಿದ್ದರು.

ತಮ್ಮ ನೋವನ್ನು ಹಂಚದೇ ನಗು, ಸಂತೋಷವನ್ನೇ ಸದಾ ಹಂಚುತ್ತಿದ್ದ ಅವರು, ಜೀವಿತಾವಧಿಯಲ್ಲಿ ಶ್ವೇತವಸ್ತ್ರಧಾರಿಗಳಾಗಿ ಬಸವಾದಿ ಪ್ರಮಥರ ವಚನಗಳನ್ನು ಮನೆಮನಗಳಿಗೆ ಮುಟ್ಟಿಸಿದವರು ಎಂದರು. ಶರಣರ ತ್ರಿಪದಿ, ನಾಮಾವಳಿ, ಕವನ ಸಂಕಲನ, ಆಧುನಿಕ ವಚನಗಳು, ಜನಪದ, ಭಕ್ತಿ ಗೀತೆಗಳು, ವಿಡಂಬನಾ ಕೃತಿಗಳನ್ನು ರಚಿಸಿದ್ದಾರೆ ಎಂದರು.

ಎಸ್.ಎಸ್,ಗಡೇದ ನುಡಿನಮನ ಸಲ್ಲಿಸಿದರು. ಮೃತರ ಆತ್ಮಕ್ಕೆ ಚಿರಶಾಂತಿಕೋರಿ ಮೌನಾಚರಣೆ ಮಾಡಲಾಯಿತು. ಆರಂಭದಲ್ಲಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಸಾಹೇಬಗೌಡ ಬಿರಾದಾರ, ಈರಣ್ಣ ಕಲಬುರ್ಗಿ, ಕಾಶಿನಾಥ ಸಜ್ಜನ, ಜಗದೀಶ ಬಿಳೇಭಾವಿ, ಅಶೋಕ ಚಿನಗುಡಿ, ಈರಣ್ಣ ಜಿಗಜಿನ್ನಿ, ಜೈಸಿಂಗ ಮೂಲಿಮನಿ, ರಾಜು ದೇಗಿನಾಳ, ಬಸವರಾಜ ಕುಂಬಾರ, ಶಿವಲಿಂಗಪ್ಪ ಪಾಲ್ಕಿ, ಸಂಗಮೇಶ ಪಾಲ್ಕಿ, ಅಪ್ಪು ಕಲ್ಲೂರ, ಅಶೋಕ ಬಳಗಾನೂರ, ಗುಂಡುರಾವ ಧನಪಾಲ, ಮಲ್ಲಿಕಾರ್ಜುನ ಹಿಪ್ಪರಗಿ, ಮಂಜುನಾಥ ಶೆಟ್ಟಿ, ಆರ್.ವಿ,ಜಾಲವಾದಿ, ಜಿ.ಎಸ್,ಜಮ್ಮಲದಿನ್ನಿ, ಶಿವರಾಜ ಚೌಧರಿ, ವಿಶ್ವನಾಥ ಕತ್ತಿ, ಅಪ್ಪುಗೌಡ ಪಾಟೀಲ, ಭೀಮಣ್ಣ ಸೂಳಿಭಾವಿ, ಉಮಾ ಸಾಲಂಕಿ, ಪ್ರಶಾಂತ ಅಂಬಿಗೇರ, ವೈ.ಬಿ.ಬಡಿಗೇರ, ಶಶಿ ಮೂಕಿಹಾಳ, ಮಹಾಂತೇಶ ಸಜ್ಜನ, ಇತರರಿದ್ದರು.

## ಸಾಹಿತ್ಯ ಸಿಂಚನ

ಮುಳ್ಳಿನ ಹಾದಿ

ಕಾಲು ಚುಚ್ಚುವ ಮುಳ್ಳಿನಲಿ
ಬದುಕಿನ ನೋವಿನ ಕಥೆ ಇದೆ,
ಕಲ್ಲು–ಮುಳ್ಳು ತುಂಬಿದ ದಾರಿಲಿ
ಗೆಲುವಿನ ಹೆಜ್ಜೆ ಗುರುತಿದೆ.

ಬೆವರ ಹನಿ ಉದುರಿದ ನೆಲದಲಿ
ಸಂಕಲ್ಪದ ಬೀಜ ಮೊಳಕೆಯೊಡೆದಿದೆ,
ಕಣ್ಣೀರ ಸಿಂಚನ ಸೋಕಿದ ಮೇಲೆ
ಭರವಸೆಯ ಹೂವು ಅರಳಿದೆ.

ಕತ್ತಲೆ ಕವಿದ ರಾತ್ರಿಯಲಿ
ನಕ್ಷತ್ರ ದಾರಿ ತೋರಿದಂತೆ,
ಕಷ್ಟದ ಹಾದಿ ಕಲಿಸಿಕೊಟ್ಟಿತು
ನಗುವಿನ ಬೆಲೆ ಎಷ್ಟೆಂದು

ಮುಳ್ಳು ಚುಚ್ಚಿದರೇನಂತೆ,
ಕಾಲು ಕೆಂಪಾದರೇನಂತೆ,
ಮುಂದೆ ಸಾಗುವ ಛಲವೊಂದಿದ್ರೆ
ಹೂವಿನ ತೋಟ ಸಿಗುವುದು ನಿಶ್ಚಿತ.

ಬದುಕು ಹೂವಿನ ಹಾಸಿಗೆ ಅಲ್ಲ,
ಮುಳ್ಳಿನ ಹಾದಿಯ ಪಯಣ ಇದು,
ಎಡವಿ ಬಿದ್ದರೂ ಏಳಬೇಕು,
"ಸೋಲು ಅಂತ್ಯವಲ್ಲ, ಪಾಠ" ಅನ್ನೋದು
ನೆನಪಿರಲಿ.

ಎಸ್. ದುರಗಪ್ಪ.ಕುಷ್ಟಗಿ

## ರಾಷ್ಟ್ರೀಯ ಡೆಂಗ್ಯೂ ದಿನ: ಸಾರ್ವಜನಿಕರ ಸಹಕಾರ ಅಗತ್ಯ ? ಜಾಗೃತಿ ಜಾಥಾ ಮೂಲಕ ಅರಿವು

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು, ಮೇ 16: ದೇಶದಾದ್ಯಂತ ಪ್ರತಿ ವರ್ಷ ಮೇ 16ರಂದು ರಾಷ್ಟ್ರೀಯ ಡೆಂಗ್ಯೂ ದಿನವನ್ನು ಆಚರಿಸಲಾಗುತ್ತಿದ್ದು, ಈ ವರ್ಷ "ಪರೀಕ್ಷಿಸಿ, ಸ್ವಚ್ಛಗೊಳಿಸಿ, ಮುಚ್ಚಿ: ಡೆಂಗ್ಯೂ ಸೋಲಿಸಲು ಕ್ರಮಗಳು" ಎಂಬ ಧ್ಯೇಯವಾಕ್ಯದೊಂದಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.**





ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ರಾಯಚೂರು, ಜಿಲ್ಲಾ ರೋಗವಾಹಕ ಆಶ್ರೀತ ರೋಗ ನಿಯಂತ್ರಣ ಕಾರ್ಯಾಲಯ ರಾಯಚೂರು, ತಾಲೂಕ್ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಸಿಂಧನೂರು, ನಗರ ಆರೋಗ್ಯ ಕೇಂದ್ರ ಹಾಗೂ ಸನ್ ರೈಜ್ ಪ್ಯಾರಾ ಮೆಡಿಕಲ್ ಕಾಲೇಜ್ ಸಿಂಧನೂರು ಅವರ ಸಂಯುಕ್ತ ಆಶ್ರಯದಲ್ಲಿ ಸ್ಥಳೀಯ ಸಾರ್ವಜನಿಕ ಆಸ್ಪತ್ರೆಯಲ್ಲಿ ರಾಷ್ಟ್ರೀಯ ಡೆಂಗ್ಯೂ ದಿನ ಕಾರ್ಯಕ್ರಮ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಹೃದಯರೋಗ ತಜ್ಞರಾದ ಡಾ. ಹನುಮಂತರೆಡ್ಡಿ, ಡೆಂಗ್ಯೂ ರೋಗವು ಹಗಲು ಹೊತ್ತಿನಲ್ಲಿ ಕಚ್ಚುವ ಈಡಿಸ್ ಈಜಿಪ್ಟೈ ಸೊಳ್ಳೆಯಿಂದ ಹರಡುವ ವೈರಲ್ ಜ್ವರವಾಗಿದ್ದು, ತೀವ್ರ ಜ್ವರ, ತಲೆನೋವು, ಕಣ್ಣಿನ ಹಿಂಭಾಗದ ನೋವು ಹಾಗೂ ಕೀಲು ನೋವು ಪ್ರಮುಖ ಲಕ್ಷಣಗಳಾಗಿವೆ ಎಂದು ತಿಳಿಸಿದರು.

ಡಾ. ಮಂಜುನಾಥ ಅಣ್ಣಾಗೌಡ ಮಾತನಾಡಿ, ಮನೆಯ ಸುತ್ತಮುತ್ತ ನಿಂತಿರುವ ಶುದ್ಧ ನೀರಿನಲ್ಲಿ ? ಸಿಮೆಂಟ್ ತೊಟ್ಟಿಗಳು, ಬ್ಯಾರಲ್, ಡ್ರಮ್, ಹೂವಿನ ಕುಂಡಗಳು, ಬಳಕೆಯಲ್ಲದ ಟೈರ್‌ಗಳು ಹಾಗೂ ಪ್ಲಾಸ್ಟಿಕ್ ತ್ಯಾಜ್ಯಗಳಲ್ಲಿ ಸೊಳ್ಳೆಗಳು ಸಂತಾನೋತ್ಪತ್ತಿ ಮಾಡುವುದರಿಂದ ಸಾರ್ವಜನಿಕರು ವಾರಕ್ಕೊಮ್ಮೆ ನೀರಿನ ಸಂಗ್ರಹಗಳನ್ನು ಪರಿಶೀಲಿಸಿ ಸ್ವಚ್ಛಗೊಳಿಸಬೇಕು ಎಂದು ಸಲಹೆ ನೀಡಿದರು. ನೀರಿನ ಪಾತ್ರೆಗಳನ್ನು ಕೇವಲ ಖಾಲಿ ಮಾಡುವುದು ಸಾಕಾಗದೆ ಉಜ್ಜಿ ತೊಳೆಯುವುದು ಹಾಗೂ ಬಿಗಿಯಾಗಿ ಮುಚ್ಚಿಡುವುದು ಅಗತ್ಯವೆಂದರು.

ಇಎನ್‌ಟಿ ತಜ್ಞರಾದ ಡಾ. ರವಿ ಮಾತನಾಡಿ, ಹಗಲು ಸಮಯದಲ್ಲಿ ಪೂರ್ಣ ತೋಳಿನ ಬಟ್ಟೆ ಧರಿಸುವುದು, ಸೊಳ್ಳೆ ಪರದೆ ಬಳಸುವುದು ಸುರಕ್ಷಿತ ಕ್ರಮಗಳಾಗಿವೆ. ಜ್ವರ ಕಂಡುಬಂದ ತಕ್ಷಣ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ರಕ್ತ ಪರೀಕ್ಷೆ ಮಾಡಿಸಿಕೊಳ್ಳಬೇಕು ಹಾಗೂ ವೈದ್ಯರ ಸಲಹೆ ಇಲ್ಲದೆ ಔಷಧಿ ಸೇವಿಸಬಾರದು ಎಂದು ಹೇಳಿದರು. ತಾಲೂಕು ಮೇಲ್ವಿಚಾರಕ ಎಫ್.ಎ. ಹಣಗಿ ಅವರು ಮಾತನಾಡಿ, ಸರ್ಕಾರದ ವತಿಯಿಂದ ಆಶಾ ಕಾರ್ಯಕರ್ತೆಯರು ಮನೆಮನೆಗೆ ಭೇಟಿ ನೀಡಿ ಲಾರ್ವಾ ಸಮೀಕ್ಷೆ ನಡೆಸುತ್ತಿದ್ದಾರೆ.

ಅಗತ್ಯವಿದ್ದಲ್ಲಿ ಫಾಗಿಂಗ್ ಕಾರ್ಯವೂ ಕೈಗೊಳ್ಳಲಾಗುತ್ತಿದೆ. ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಲು ಸಾರ್ವಜನಿಕರ ಸಹಭಾಗಿತ್ವ ಅತ್ಯವಶ್ಯಕ ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ತಾಲೂಕು ತಂಡದ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ರಂಗನಾಥ ಜಿ., ಸಂಗನಗೌಡ ಪಾಟೀಲ್, ಎನ್‌ಸಿಡಿ ವಿಭಾಗದ ಮುತ್ತಮ್ಮ ಹಾಗೂ ಸುಮಾ, ಸನ್ ರೈಜ್ ಕಾಲೇಜಿನ ಪ್ರಾಂಶುಪಾಲರಾದ ಲಾಜೆಲ್ ಸಿರೀಲ್, ವೀರೇಶ್ವರಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು, ನಗರ ಆರೋಗ್ಯ ಕೇಂದ್ರದ ಶಾಂತಮ್ಮ (ಪಿಎಚ್‌ಸಿಒ), ಕಿರಿಯ ಆರೋಗ್ಯ ನಿರೀಕ್ಷಕ ಹನುಮಂತ, ಮಲೇರಿಯಾ ಲಿಂಕ್ ಸಿಬ್ಬಂದಿ ಮಲ್ಲಪ್ಪ ಹಾಗೂ ಆಶಾ ಕಾರ್ಯಕರ್ತೆಯರ ತಂಡ ಭಾಗವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ಸನ್ ರೈಜ್ ಪ್ಯಾರಾ ಮೆಡಿಕಲ್ ಶಾಲೆಯ ವಿದ್ಯಾರ್ಥಿಗಳು ಮತ್ತು ಆರೋಗ್ಯ ಸಿಬ್ಬಂದಿ ನಗರದ ಪ್ರಮುಖ ರಸ್ತೆಗಳಲ್ಲಿ ಜಾಥಾ ನಡೆಸಿ ಘೋಷಣೆಗಳ ಮೂಲಕ ಸಾರ್ವಜನಿಕರಿಗೆ ಡೆಂಗ್ಯೂ ತಡೆ ಕುರಿತು ಅರಿವು ಮೂಡಿಸಿದರು

## ಅಂಚೆ ಇಲಾಖೆಯಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆಗೆ ಉತ್ತೇಜನ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಸಾರ್ವಜನಿಕರ ಸೌಲಭ್ಯ ಹಾಗೂ ವೇಗವಾದ ಸೇವೆಯನ್ನು ಗಮನದಲ್ಲಿಟ್ಟುಕೊಂಡು ಅಂಚೆ ಇಲಾಖೆ ವತಿಯಿಂದ ಅಂಚೆ ಕಚೇರಿಗಳಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಉತ್ತೇಜಿಸಲಾಗುತ್ತಿದೆ ಎಂದು ಅಂಚೆ ಇಲಾಖೆಯ ರಾಯಚೂರು ವಿಭಾಗದ ಅಧೀಕ್ಷಕರು ತಿಳಿಸಿದ್ದಾರೆ.**

ಅಂಚೆ ಸೇವೆಗಳಾದ ಮನಿ ಆರ್ಡರ್, ಸ್ಪೀಡ್ ಪೋಸ್ಟ್ ಮತ್ತು ಪಾರ್ಸೆಲ್ ಬುಕಿಂಗ್, ಅಂಚೆ ಜೀವ ವಿಮೆ ಪ್ರೀಮಿಯಂ ಪಾವತಿ ಹಾಗೂ ಇತರೆ ಸೇವೆಗಳಿಗಾಗಿ ಸಾರ್ವಜನಿಕರು ಯುಪಿಐ, ಕ್ಯೂಆರ್ ಕೋಡ್, ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಹಾಗೂ ಮೊಬೈಲ್ ಬ್ಯಾಂಕಿಂಗ್ ಮೂಲಕ ಡಿಜಿಟಲ್ ಪಾವತಿಯನ್ನು ಬಳಸುವಂತೆ ಕೋರಲಾಗಿದೆ. ಡಿಜಿಟಲ್ ಪಾವತಿಯಿಂದ ನಗದು ವ್ಯವಹಾರಗಳ ಅವಶ್ಯಕತೆ ಕಡಿಮೆಯಾಗುವುದರೊಂದಿಗೆ ವ್ಯವಹಾರಗಳು ಸುರಕ್ಷಿತ, ಸುಲಭ ಹಾಗೂ ಪಾರದರ್ಶಕವಾಗುತ್ತವೆ. ಜೊತೆಗೆ ಸಾರ್ವಜನಿಕರಿಗೆ ಸಮಯ ಉಳಿತಾಯವಾಗುವುದರೊಂದಿಗೆ ತ್ವರಿತ ಸೇವೆ ದೊರೆಯಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಡಿಜಿಟಲ್ ಪಾವತಿ ವಿಧಾನಗಳನ್ನು ಬಳಸಿಕೊಂಡು ಅಂಚೆ ಇಲಾಖೆಯ ಡಿಜಿಟಲ್ ಸೇವೆಗಳಿಗೆ ಸಹಕರಿಸುವಂತೆ ಅಂಚೆ ಇಲಾಖೆಯ ರಾಯಚೂರು ವಿಭಾಗದ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವಂತೆ ಆಗ್ರಹಿಸಿ ಮನವಿ



❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಹರನಾಳ ಗ್ರಾಮದಲ್ಲಿ ಹಲವಾರು ದಿನಗಳಿಂದ ಶುದ್ಧ ಕುಡಿಯುವ ನೀರು ಸಮರ್ಪಕವಾಗಿ ಸರಬರಾಜು ಆಗದ ಕಾರಣ ಗ್ರಾಮಸ್ಥರು ತೀವ್ರ ತೊಂದರೆಯನ್ನು ಅನುಭವಿಸುತ್ತಿದ್ದು ಈ ಗಂಭೀರ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸುವಂತೆ ಆಗ್ರಹಿಸಿ ಗ್ರಾಮಸ್ಥರು ತಹಸಿಲ್ದಾರ ಡಾ.ವಿನಯಾ ಹೂಗಾರ ಹಾಗೂ ತಾಪಂ ಇಓ ಅನುಸೂಯಾ ಚಲವಾದಿ ಇವರಿಗೆ ಶನಿವಾರ ಮನವಿ ಸಲ್ಲಿಸಿದರು.**

ಮನವಿ ಪತ್ರದಲ್ಲಿ ಹರನಾಳ ಗ್ರಾಮದಲ್ಲಿ ಜನರಿಗೆ ಕುಡಿಯಲು ಹಾಗೂ ಇತರೆ ದೈನಂದಿನ ಬಳಕೆಗೆ ಬೇಕಾದ ನೀರು ಸಮರ್ಪಕವಾಗಿ ದೊರೆಯುತ್ತಿಲ್ಲ ಕೆಲವು ಪ್ರದೇಶಗಳಲ್ಲಿ ನೀರು ಬಹಳ ದಿನಗಳಿಂದ ಸರಬರಾಜು ಆಗದೇ ಇರುವುದರಿಂದ ಗ್ರಾಮಸ್ಥರು ದೂರದ ಸ್ಥಳಗಳಿಗೆ ತೆರಳಿ ಹಣಕೊಟ್ಟು ನೀರು ತರುವ ದುಸ್ಥಿತಿ ಉಂಟಾಗಿದೆ ಹಲವಾರು ದಿನಗಳಿಂದ ಈ ಸಮಸ್ಯೆ ಇದ್ದರೂ ಈಗ ಬೇಸಿಗೆಕಾಲ ಇರುವುದರಿಂದ ಸಮಸ್ಯೆ ಮತ್ತಷ್ಟು ಗಂಭೀರವಾಗಿದೆ. ಗ್ರಾಮದಲ್ಲಿ ನೀರು ಪೂರೈಕೆಯ ಯಾವುದೇ ಒಂದು ಸರಿಯಾದ ವ್ಯವಸ್ಥೆ ಇಲ್ಲದೆ ಇರುವುದರಿಂದ ಪ್ರತಿದಿನವೂ ಜನರು ಶುದ್ಧ ನೀರಿಗಾಗಿ ಪರದಾಡುವಂಥಹ ಪರಿಸ್ಥಿತಿ ಉದ್ಭವಿಸಿದೆ.

ಗ್ರಾಮದಲ್ಲಿ ಲಭ್ಯ ಇರುವ ಭಾವಿಯ ನೀರು ಕುಡಿಯುತ್ತಿರುವರಿಂದ ಅದು ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಈ ಸಮಸ್ಯೆಗೆ ಈ ಹಂತದಲ್ಲಿ ಶಾಶ್ವತ ಪರಿಹಾರ ಕಂಡುಹಿಡಿಲು ಸಾಧ್ಯವಿಲ್ಲದಿದ್ದಲ್ಲಿ ಕನಿಷ್ಠಪಕ್ಷ ನೀರಿನ ಟ್ಯಾಂಕರ್ ವ್ಯವಸ್ಥೆಯಾದರೂ ಮಾಡಿಸಬೇಕು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳು ಈ ಗಂಭೀರ ಸಮಸ್ಯೆ ಪರಿಹಾರದ ಕುರಿತು ಆದಷ್ಟು ಬೇಗ ಕ್ರಮ ವಹಿಸಬೇಕು ಎಂದು ತಿಳಿಸಲಾಗಿದೆ. ಈ ಸಮಯದಲ್ಲಿ ಗ್ರಾಮಸ್ಥರಾದ ಬಸವರಾಜ ದುಂದಗಿ, ನಿಂಗನಗೌಡ ಬಿರಾದಾರ, ಪರಶುರಾಮ ನಾಗೂರ, ಡಿ.ಸಿ.ಚಳ್ಳಗಿ, ಗೋಪಾಲ ಕಟ್ಟಿಮನಿ ತಾಳಿಕೋಟಿ, ಹಣಮಂತ್ರಾಯ ಬೊಮ್ಮನಹಳ್ಳಿ, ನಿಂಗಪ್ಪ ನಾಗೂರ, ದೇವಪ್ಪ ಮೆಲ್ಡಾಪೂರ, ಮಾಳಪ್ಪ ಅಂಬಳನೂರ,ದೇವರಾಜ ಬೊಮ್ಮನಹಳ್ಳಿ, ಅಯ್ಯಪ್ಪ ಗಡ್ಡಿ, ಸಣ್ಣಪ್ಪ ಗೌಡ ಪಾಟೀಲ, ನಿಂಗಪ್ಪ ಬೆನಕನಹಳ್ಳಿ, ದೇವಪ್ಪ ನಾಗೂರ, ನಿಂಗಪ್ಪ ಚಳ್ಳಗಿ ಪರಶುರಾಮ ಬಿರಾದಾರ, ಬಸವರಾಜ ಬೊಮ್ಮನಹಳ್ಳಿ, ರೇವಣಸಿದ್ದ ಗಡ್ಡಿ, ರೇವಣಸಿದ್ದಪ್ಪ ಬಿರಾದಾರ, ಸಿದ್ದು ತುಂಬಗಿ, ದೇವಪ್ಪ ಅಂಬಳನೂರ,ಕೆ.ಡಿ. ಅಂಗಡಿ, ಮಲ್ಲಪ್ಪ ಚಳ್ಳಗಿ ಇದ್ದರು.

## ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವಂತೆ ಆಗ್ರಹಿಸಿ ಮನವಿ



❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಹರನಾಳ ಗ್ರಾಮದಲ್ಲಿ ಹಲವಾರು ದಿನಗಳಿಂದ ಶುದ್ಧ ಕುಡಿಯುವ ನೀರು ಸಮರ್ಪಕವಾಗಿ ಸರಬರಾಜು ಆಗದ ಕಾರಣ ಗ್ರಾಮಸ್ಥರು ತೀವ್ರ ತೊಂದರೆಯನ್ನು ಅನುಭವಿಸುತ್ತಿದ್ದು ಈ ಗಂಭೀರ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸುವಂತೆ ಆಗ್ರಹಿಸಿ ಗ್ರಾಮಸ್ಥರು ತಹಸಿಲ್ದಾರ ಡಾ.ವಿನಯಾ ಹೂಗಾರ ಹಾಗೂ ತಾಪಂ ಇಓ ಅನುಸೂಯಾ ಚಲವಾದಿ ಇವರಿಗೆ ಶನಿವಾರ ಮನವಿ ಸಲ್ಲಿಸಿದರು.**

ಮನವಿ ಪತ್ರದಲ್ಲಿ ಹರನಾಳ ಗ್ರಾಮದಲ್ಲಿ ಜನರಿಗೆ ಕುಡಿಯಲು ಹಾಗೂ ಇತರೆ ದೈನಂದಿನ ಬಳಕೆಗೆ ಬೇಕಾದ ನೀರು ಸಮರ್ಪಕವಾಗಿ ದೊರೆಯುತ್ತಿಲ್ಲ ಕೆಲವು ಪ್ರದೇಶಗಳಲ್ಲಿ ನೀರು ಬಹಳ ದಿನಗಳಿಂದ ಸರಬರಾಜು ಆಗದೇ ಇರುವುದರಿಂದ ಗ್ರಾಮಸ್ಥರು ದೂರದ ಸ್ಥಳಗಳಿಗೆ ತೆರಳಿ ಹಣಕೊಟ್ಟು ನೀರು ತರುವ ದುಸ್ಥಿತಿ ಉಂಟಾಗಿದೆ ಹಲವಾರು ದಿನಗಳಿಂದ ಈ ಸಮಸ್ಯೆ ಇದ್ದರೂ ಈಗ ಬೇಸಿಗೆಕಾಲ ಇರುವುದರಿಂದ ಸಮಸ್ಯೆ ಮತ್ತಷ್ಟು ಗಂಭೀರವಾಗಿದೆ. ಗ್ರಾಮದಲ್ಲಿ ನೀರು ಪೂರೈಕೆಯ ಯಾವುದೇ ಒಂದು ಸರಿಯಾದ ವ್ಯವಸ್ಥೆ ಇಲ್ಲದೆ ಇರುವುದರಿಂದ ಪ್ರತಿದಿನವೂ ಜನರು ಶುದ್ಧ ನೀರಿಗಾಗಿ ಪರದಾಡುವಂಥಹ ಪರಿಸ್ಥಿತಿ ಉದ್ಭವಿಸಿದೆ.

ಗ್ರಾಮದಲ್ಲಿ ಲಭ್ಯ ಇರುವ ಭಾವಿಯ ನೀರು ಕುಡಿಯುತ್ತಿರುವರಿಂದ ಅದು ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಈ ಸಮಸ್ಯೆಗೆ ಈ ಹಂತದಲ್ಲಿ ಶಾಶ್ವತ ಪರಿಹಾರ ಕಂಡುಹಿಡಿಲು ಸಾಧ್ಯವಿಲ್ಲದಿದ್ದಲ್ಲಿ ಕನಿಷ್ಠಪಕ್ಷ ನೀರಿನ ಟ್ಯಾಂಕರ್ ವ್ಯವಸ್ಥೆಯಾದರೂ ಮಾಡಿಸಬೇಕು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳು ಈ ಗಂಭೀರ ಸಮಸ್ಯೆ ಪರಿಹಾರದ ಕುರಿತು ಆದಷ್ಟು ಬೇಗ ಕ್ರಮ ವಹಿಸಬೇಕು ಎಂದು ತಿಳಿಸಲಾಗಿದೆ. ಈ ಸಮಯದಲ್ಲಿ ಗ್ರಾಮಸ್ಥರಾದ ಬಸವರಾಜ ದುಂದಗಿ, ನಿಂಗನಗೌಡ ಬಿರಾದಾರ, ಪರಶುರಾಮ ನಾಗೂರ, ಡಿ.ಸಿ.ಚಳ್ಳಗಿ, ಗೋಪಾಲ ಕಟ್ಟಿಮನಿ ತಾಳಿಕೋಟಿ, ಹಣಮಂತ್ರಾಯ ಬೊಮ್ಮನಹಳ್ಳಿ, ನಿಂಗಪ್ಪ ನಾಗೂರ, ದೇವಪ್ಪ ಮೆಲ್ಡಾಪೂರ, ಮಾಳಪ್ಪ ಅಂಬಳನೂರ,ದೇವರಾಜ ಬೊಮ್ಮನಹಳ್ಳಿ, ಅಯ್ಯಪ್ಪ ಗಡ್ಡಿ, ಸಣ್ಣಪ್ಪ ಗೌಡ ಪಾಟೀಲ, ನಿಂಗಪ್ಪ ಬೆನಕನಹಳ್ಳಿ, ದೇವಪ್ಪ ನಾಗೂರ, ನಿಂಗಪ್ಪ ಚಳ್ಳಗಿ ಪರಶುರಾಮ ಬಿರಾದಾರ, ಬಸವರಾಜ ಬೊಮ್ಮನಹಳ್ಳಿ, ರೇವಣಸಿದ್ದ ಗಡ್ಡಿ, ರೇವಣಸಿದ್ದಪ್ಪ ಬಿರಾದಾರ, ಸಿದ್ದು ತುಂಬಗಿ, ದೇವಪ್ಪ ಅಂಬಳನೂರ,ಕೆ.ಡಿ. ಅಂಗಡಿ, ಮಲ್ಲಪ್ಪ ಚಳ್ಳಗಿ ಇದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## "ವಚನ ವೈಭವ : 2026" ಜಾನಪದ ಸೊಗಡು ಬಿತ್ತರಿಸಿದೆ :ಭೀಮಣ್ಣ ಮಾಸ್ಟರ್

❑ ನೈಜ್ಯ ದೆಸೆ ನ್ಯೂಸ್

**ಪೋತ್ನಾಳ: ಸಮೀಪದ ಧಾರ್ಮಿಕ ಕೇಂದ್ರ ಶ್ರೀ ಅಡವಿಸಿದ್ದೇಶ್ವರ ಸುಕ್ಷೇತ್ರ ಉಟಕನೂರಲ್ಲಿ ಶ್ರೀ ಏಕಲವ್ಯ ದೊಡ್ಡಾಟ ಸಂಘ(ರಿ) ತಡಕಲ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಯಚೂರು ಇವರ ಗಿರಿಜನ ಉಪಯೋಜನೆ ಅಡಿಯಲ್ಲಿ ಬಾದಾಮಿ ಅಮಾವಾಸ್ಯೆ ದಿನ ಶನಿವಾರ ಬೆಳಿಗ್ಗೆ 'ವಚನ ವೈಭವ –: 2026' ವಿಶೇಷ ಕಾರ್ಯಕ್ರಮ ನಡೆಯಿತು. ಉದ್ಘಾಟನೆಯನ್ನು ಉಭಯ ಶ್ರೀಗಳಾದ ಮುದುಕಪ್ಪ ತಾತ ಶ್ರೀ ಅಡವಿಸಿದ್ದೇಶ್ವರ ಸುಕ್ಷೇತ್ರ ಉಟಕನೂರು, ರಂಗಯ್ಯ ತಾತನವರು ಬುದ್ದಿನ್ನಿ ಡೊಳ್ಳು ಬಾರಿಸುವ ಮೂಲಕ ನೆರವೇರಿಸಿ ದಿವ್ಯ ಸಾನಿಧ್ಯ ವಹಿಸಿದ್ದರು.**



ನಂತರ ಮುಖ್ಯ ಅತಿಥಿಗಳಾಗಿ ಆಗಮಿಸಿದ ನಿವೃತ್ತ ಶಿಕ್ಷಕರಾದ ಭೀಮಣ್ಣ ಉದ್ಬಾಳ ಇವರು ಮಾತನಾಡಿ ನಮ್ಮ ದೇಶದ ವಿವಿಧ ಪುರಾತನ ಇತಿಹಾಸ, ಕಲೆಗಳನ್ನು ಹಾಡು ಪ್ರದರ್ಶನ ಮೂಲಕ ಸಾರುವ ಕಲೆಗಳ ಅನಾವರಣ ಮಾಡುವ ಈ ಕಾರ್ಯಕ್ರಮ ನಿಜಕ್ಕೂ ವಿಶೇಷವಾಗಿದೆ. ಇಂದಿನ ಆಧುನಿಕ ತಂತ್ರಜ್ಞಾನ ಯುಗದಲ್ಲಿ ಪುರಾತನ ಕಲೆಗಳು ಹಾಗೂ ಕಲಾವಿದರು ತೆರೆಗೆ ಸರಿಯುತ್ತಿರುವ ಈ ಕಾಲದಲ್ಲಿ ಹಳ್ಳಿ ಭಾಗದಲ್ಲಿ ಸರ್ಕಾರದ ಅಲ್ಪ ಸ್ವಲ್ಪ ಸಹಕಾರದಿಂದ ಕಲಾವಿದ ತಂಡ ಇನ್ನಷ್ಟು ಕಲಾಭಿಮಾನಿಗಳ ಸಹಾಯದಿಂದ ಹೀಗೆ ಉತ್ತಮ ಕಾರ್ಯಕ್ರಮಗಳನ್ನು ನೀಡುತ್ತಾ ಭಾರತೀಯ ಕಲೆಗಳನ್ನು ಉಳಿಸಿ ಬೆಳೆಸಲಿ ಎಂದು ಆಶೈಸಿದರು. ವೇದಿಕೆ ಮೇಲೆ ಶ್ರೀಶೈಲಗೌಡ ಮಾ.ಪಾ ತಡಕಲ್, ಶ್ರೀಮತಿ ಉತ್ತರಾದೇವಿ ಎಸ್. ಮಠಪತಿ ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಯಚೂರು, ಡಾ.ಬಸವರಾಜಪ್ಪ ಪೋತ್ನಾಳ, ಶಿವರಾಜಪ್ಪ ಧಣಿ ಜೀನೂರು, ಅಮರೇಶ ಹಸಮಕಲ್ ಜಾಗೃತಿ ಸಮಿತಿ ಸದಸ್ಯರು ರಾಯಚೂರು, ಅಮರೇಶ ಪೂಜಾರಿ ವಲ್ಕಂದಿನ್ನಿ ಬೈಲಾಟ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು, ಯಂಕೋಬ ಮಾಸ್ಟರ್ ಗೋನವಾರ ಬೈಲಾಟ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು, ಶ್ರೀಮತಿ ಶಾಂತಮ್ಮ ಹಸಮಕಲ್ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು, ಶ್ರೀಮತಿ ಯಲ್ಲಮ್ಮ ಜಿನ್ನಾಪೂರ ಜಾನಪದ ಅಕಾಡಮಿ ಪ್ರಶಸ್ತಿ ಪುರಸ್ಕೃತರು, ಯಂಕನಗೌಡ ಪೇಟಿಗೌಡ ದಿದ್ದಿಗಿ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು, ಉಟಕನೂರು ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಈರಮ್ಮ ಅಮರಪ್ಪ, ಹಾಲಿ ಹಾಗೂ ಮಾಜಿ ಸದಸ್ಯರು, ಬಸಣ್ಣ ಬನ್ನಿಗನೂರು ಯಾಪಲಪರ್ವಿ, ಶರಣೇಗೌಡ ಮರಕಮದಿನ್ನಿ, ಶರಣಪ್ಪ ದೇವರಮನಿ ಮರಕಮದಿನ್ನಿ, ಪತ್ರಿಕಾ ವರದಿಗಾರರಾದ ಲಿಂಗರಾಜ ತಡಕಲ್, ದೇವರಾಜ ದೇವಿಪುರ ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿಮಿತ್ತ ನಡೆದ ಮೆರವಣಿಗೆಯಲ್ಲಿ ಬಸವರಾಜ ಸಿಂಧನೂರ ವೀರಗಾಸೆ, ರಮೇಶ ಹಸಮಕಲರ ಚಿಲಿಪಿಲಿಗೊಂಬಿ, ಅಯ್ಯಪ್ಪ ಮಲ್ಲದಗುಡ್ಡರ ಡ್ರಮ್ ಸೆಟ್, ಸಿದ್ದಪ್ಪ ತಡಕಲರ ಅಲಗಿಮೇಳ ತಂಡಗಳು ಕಲಾ ಪ್ರದರ್ಶನ ನಡೆಸಿಕೊಟ್ಟವು. ನಂತರ ವೇದಿಕೆ ಮೇಲೆ ವಿವಿಧ ತಂಡಗಳಿಂದ ತಬಲವಾದನ, ಜಾನಪದ ಗಾಯನ, ಪ್ಯಾಡ್ ವಾದನ, ಕವಿಗೋಷ್ಠಿ, ತತ್ವಪದ ಗಾಯನ, ವಚನ ಗಾಯನ, ದಾಸವಾಣಿ, ಬಯಲಾಟ ಪದಗಳು, ಡೊಳ್ಳಿನ ಪದಗಳು, ಹಂತಿ ಪದಗಳು, ಏಕಪಾತ್ರಾಭಿನಯ, ಬೈಲಾಟ, ಬುರ್ರಾಕಥಾ, ಸಂಪ್ರದಾಯ ಹಾಡುಗಳು, ರಿವಾತ್ತಿ ಪದಗಳು ಭಜನಾ ಪದಗಳು ಮುಂತಾದ ಸೊಗಡಿನ ಮನೋರಂಜನೆ ಕಾರ್ಯಕ್ರಮಗಳು ನಡೆದವು.

ನಿರೂಪಣೆಯನ್ನು ತಡಕಲ್ ಗ್ರಾಮದ ದುರುಗಪ್ಪ ಶಿಕ್ಷಕರು, ಮುದುಕಪ್ಪ ಮರಡ್ಡಿ ಮಾಡಿದರು. ಸ್ವಾಗತ ಕಾರ್ಯವನ್ನು ತಡಕಲ್ ಗ್ರಾಮದ ಗಜಾನನ ಯುವಕ ಸಂಘ, ದುರ್ಗಾದೇವಿ ನಾಟ್ಯ ಸಂಘ, ಮಹರ್ಷಿ ವಾಲ್ಮೀಕಿ ಯುವಕ ಸಂಘ, ಪವರ್‌ಸ್ಟಾರ್ ಬಾಯ್ಸ್, ಏಕಲವ್ಯ ದೊಡ್ಡಾಟ ಸಂಘದ ಸರ್ವ ಸದಸ್ಯರು, ಉಟಕನೂರು ಗ್ರಾಮದ ಗುರುಹಿರಿಯರು, ಕಲಾ ಪ್ರೇಮಿಗಳು ಮಾಡಿದರು. ಕಾರ್ಯಕ್ರಮದ ಸರ್ವ ಜವಾಬ್ದಾರಿಯನ್ನು ರಂಗಪ್ಪ ಮಾಸ್ಟರ್ ತಡಕಲ್ ಅಧ್ಯಕ್ಷರು ಕರ್ನಾಟಕ ಜಾನಪದ ಅಕಾಡಮಿ ಸದಸ್ಯರು ಬೆಂಗಳೂರು, ಶರಣಪ್ಪ ನಾಯಕ ತಡಕಲ್ ಪ್ರಧಾನ ಕಾರ್ಯದರ್ಶಿಗಳು ಕಲ್ಯಾಣ ಕರ್ನಾಟಕದ ಕಲಾವಿದರ ಸಂಘ ಜಿಲ್ಲಾ ಸಂಚಾಲಕರು ರಾಯಚೂರು ಇವರು ವಹಿಸಿದ್ದರು.

## ನೇಮಕಾತಿ ಪ್ರಕಟಣೆ

DMRC ನೇಮಕಾತಿ 2026–37 ಮೇಲ್ವಿಚಾರಕ, ವ್ಯವಸ್ಥಾಪಕ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 16, 2026 ಆಒಖಅ ನೇಮಕಾತಿ 2026: 37 ಮೇಲ್ವಿಚಾರಕ, ವ್ಯವಸ್ಥಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ದೆಹಲಿ ಮೆಟ್ರೋ ರೈಲು ನಿಗಮವು ಮೇ 2026 ರ DMRC ಅಧಿಕೃತ ಅಧಿಸೂಚನೆಯ ಮೂಲಕ ಮೇಲ್ವಿಚಾರಕ, ವ್ಯವಸ್ಥಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಪಾಟ್ನಾ ಬಿಹಾರ, ಜೈಪುರ ರಾಜಸ್ಥಾನ, ದೆಹಲಿ ನವದೆಹಲಿ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 28–ಮೇ–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 06–05–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28–ಮೇ–2026 ಅಧಿಕೃತ ವೆಬ್‌ಸೈಟ್: delhimetrorail.com

## ಸಾರ್ವಜನಿಕರಿಗೆ ಅನ್ನದಾನ ಮಾಡಿ ಚಂದ್ರಕಲಾ ಪ್ರಕಾಶರವರ ವಿವಾಹ ವಾರ್ಷಿಕೋತ್ಸವ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಚಂದ್ರಕಲಾ ಪ್ರಕಾಶರವರ ವಿವಾಹ ವಾರ್ಷಿಕೋತ್ಸವದ ಅಂಗವಾಗಿ ತಾಲೂಕಿನ ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್ ವತಿಯಿಂದ ಸಾರ್ವಜನಿಕರಿಗೆ ಅನ್ನದಾನ ಕಾರ್ಯಕ್ರಮವನ್ನು ಸಿಂಧನೂರು ನಗರದ ಕೇಂದ್ರ ಬಸ್ ನಿಲ್ದಾಣದ ಪಕ್ಕದಲ್ಲಿರುವ ಶ್ರೀ ಅಂಬಾದೇವಿ ದೇವಸ್ಥಾನದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿತ್ತು.**

ಈ ಕಾರ್ಯಕ್ರಮದಲ್ಲಿ ಚಂದ್ರಕಲಾ ಮತ್ತು ಪ್ರಕಾಶ ದಂಪತಿ ಸಾರ್ವಜನಿಕ–ರಿಗೆ ಪಲಾವ್ (ಅನ್ನ) ಬಡಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಇಲ್ಲಿ ಎಷ್ಟೊಂದು ಜನರು ನಿರಾಶ್ರಿತರಿಗೆ ಈ ಬಸ್ ನಿಲ್ದಾಣ ಕೇಂದ್ರ ಸ್ಥಾನ ಇದ್ದಹಾಗೆ, ಬಸ್ ನಿಲ್ದಾಣದ ಪಕ್ಕದಲ್ಲೇ ಇರುವ ಶ್ರೀ ಅಂಬಾದೇವಿ ಸನ್ನಿಧಾನದಲ್ಲಿ ನಿರಾಶ್ರಿತರಿಗೆ ಬಡವರಿಗೆ ಕಾರ್ಮಿಕರಿಗೆ ನಮ್ಮ ವಿವಾಹ ಮಹೋತ್ಸವ ಹಸಿದವರಿಗೆ ಅನ್ನ ಹಾಕಿ ನಮ್ಮ ಜೀವನವನ್ನು ಸಾರ್ಥಕ ಪಡಿಸಿಕೊಳ್ಳುವುದಾಗಿದೆ ಎಂದರು.



ಇದೇ ವೇಳೆ ನಗರದ ಕುಷ್ಟಗಿ ರಸ್ತೆಯಲ್ಲಿರುವ ಅಪ್ನಾ ಬಜಾರ್ ಮಾಲೀಕರಾದ ಟಿಂಕು ನಾಹರ್ ಅವರು ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್ ಸೇವೆ ಮೆಚ್ಚಿ ನಿತ್ಯ ಅನ್ನದಾನಕ್ಕೆ 2000 ಪೇಪರ್ ಪ್ಲೇಟ್ ಗಳನ್ನು ದೇಣಿಗೆ ನೀಡಿ, ಸದಾ ಸೇವೆಗೆ ಬೆಂಬಲ ವ್ಯಕ್ತಪಡಿಸಿ ಮಾತನಾಡಿದ ಅವರು, ಬಡವ–ರಿಗೆ, ನಿರ್ಗತಿಕರಿಗೆ, ಅಂಗವಿಕಲರಿಗೆ, ಮದುವೆ ಸಮಾರಂಭದಲ್ಲಿ ಉಳಿದ ಅಡುಗೆಯನ್ನು ತಂದು ಅದನ್ನು ಸ್ವಲ್ಪವು ಚೆಲ್ಲದೆ ಬಡವ–ರಿಗೆ ಹಂಚುವುದು ಉತ್ತಮ ಕಾರ್ಯವಾಗಿದೆ. ಅವರ ಅಪಾರ ಸೇವೆಗೆ ನನ್ನಿಂದಾಗುವ ಒಂದು ಚಿಕ್ಕ ಕಾಣಿಕೆ ಪ್ರತಿದಿನವು 2 ಸಾವಿರ ಪೇಪರ್ ಪ್ಲೇಟ್ ಗಳನ್ನು ನೀಡುವೆ ಎಂದರು.

ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್ ಸಂಸ್ಥಾಪಕ ಕಾರ್ಯದರ್ಶಿ ಅಶೋಕ ನಲ್ಲಾ ಮಾತನಾಡಿ, ನಗರದ ಬಸ್ ನಿಲ್ದಾಣದಲ್ಲಿ ಪ್ರತಿದಿನ ರಾತ್ರಿ ದಾನಿಗಳು ಮತ್ತು ತಮ್ಮೆಲ್ಲರ ಸಹಕಾರದಿಂದ ಉಚಿತವಾಗಿ ಅನ್ನದಾನ ಮಾಡುವ ಸೇವೆಯಲ್ಲಿರುವ ನಮ್ಮ ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್ ಕಾರ್ಯಕ್ಕೆ ತಮ್ಮೆಲ್ಲರ ಶುಭ ಹಾರೈಕೆ ಆರ್ಶೀವಾದದಿಂದ ಇನ್ನೂ ಹೆಚ್ಚಿನ ಬೆಂಬಲದ ಅವಶ್ಯವಿದೆ.

ನಿಮ್ಮ ಮನೆಯ ಅಥವಾ ಕುಟುಂಬದ ಯಾವುದೇ ಶುಭ ಸಮಾರಂಭ ಮತ್ತು ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವದ ಅಂಗವಾಗಿ ಹಸಿದವರಿಗೆ ಅನ್ನದಾನ ಮಾಡಲು ಒಂದುವೇಳೆ ಬಯಸಿದರೇ ನಾವೇ ಆಹಾರ ತಯಾರಿಸಿ ನಮ್ಮ ಟ್ರಸ್ಟ್ ವತಿಯಿಂದ ಉಚಿತವಾಗಿ ಅನ್ನದಾನ ಮಾಡುತ್ತೇವೆ ಎಂದರು. ಈ ವೇಳೆ: ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್ ಸದಸ್ಯರಾದ ರಾಜೇಶ ಗೊಂದಳಿ, ಖಾಜಾ ಹುಸೇನ್, ಸೇರಿದಂತೆ, ಬಡವರಿಗೆ, ಅಂಗವಿಕಲ–ರಿಗೆ, ನಿರ್ಗತಿಕರಿಗೆ ಊಟ ಬಡಿಸಿದರು.

## ಮರುಮೌಲ್ಯ ಮಾಪನದಲ್ಲಿ ಗಂಗಾ ಕೋಳೂರ ರಾಜ್ಯಕ್ಕೆ ಪ್ರಥಮ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಮೈಲೇಶ್ವರದ ಪ್ರತಿಷ್ಠಿತ ಶ್ರೀ ಮಾರುತಿ ಶಿಕ್ಷಣ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ಬ್ರಿಲಿಯಂಟ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ಗಂಗಾ ಅಶೋಕ ಕೋಳೂರ ಪರೀಕ್ಷೆ–1ರ ಮರು ಮೌಲ್ಯ ಮಾಪನದಲ್ಲಿ 625ಕ್ಕೆ 625 ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ.**



2025–26 ನೇ ಸಾಲಿನಲ್ಲಿ ನಡೆದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಕುಮಾರಿ ಗಂಗಾ ಅಶೋಕ ಕೋಳೂರ 625ಕ್ಕೆ 623 ಅಂಕಗಳನ್ನು ಪಡೆದು ರಾಜ್ಯಕ್ಕೆ ತೃತೀಯ ಸ್ಥಾನವನ್ನು ಪಡೆದುಕೊಂಡಿದ್ದಳು. ಪ್ರತಿಭಾವಂತ ವಿದ್ಯಾರ್ಥಿನಿಯಾದ ಗಂಗಾ ಕೋಳೂರ ಹಾಗೂ ಸಂಸ್ಥೆಯ ಮುಖ್ಯಸ್ಥರು ಈ ಫಲಿತಾಂಶದಿಂದ ಸಂತುಷ್ಟರಾಗಿರಲಿಲ್ಲ ಅವಳು ರಾಜ್ಯಕ್ಕೆ ಪ್ರಥ–ಮ ಸ್ಥಾನ ಪಡೆದುಕೊಳ್ಳುತ್ತಾಳೆ ಎಂಬ ಆತ್ಮವಿಶ್ವಾಸ ಅವರಲ್ಲಿತ್ತು ಈ ಕಾರಣದಿಂದ ಮರು ಮೌಲ್ಯಮಾಪನ ಮಾಡಿಸುವುದಾಗಿ ತೀರ್ಮಾನವನ್ನು ತೆಗೆದುಕೊಂಡರು. ಅದರಂತೆ ಇದೀಗ ಮರು ಮೌಲ್ಯಮಾಪನದಲ್ಲಿ ಈ ವಿದ್ಯಾರ್ಥಿನಿಗೆ 625ಕ್ಕೆ 625 ಅಂಕಗಳು ಬಂದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಅಭಿನಂದನೆ: ವಿದ್ಯಾರ್ಥಿನಿ ಗಂಗಾ ಅಶೋಕ ಕೋಳೂರ ಅವರ ಈ ಅಭೂತಪೂರ್ವ ಸಾಧನೆಗೆ ಶ್ರೀ ಮಾರುತಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ, ಬ್ರಿಲಿಯಂಟ್ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದೆ.

## ಸೂರ್ಯಕಾಂತಿ ಉತ್ಪನ್ನ ಖರೀದಿ ಕೇಂದ್ರ ಸ್ಥಾಪನೆ: ಜಿಲ್ಲಾಧಿಕಾರಿ ಎಸ್.ಪೂವಿತಾ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಮೇ.16(ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲೆಯಲ್ಲಿ 2025–26ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ. ಗುಣಮಟ್ಟದ ಹಿಂಗಾರು ಹಂಗಾಮಿನ ಸೂರ್ಯಕಾಂತಿ ಉತ್ಪನ್ನವನ್ನು ಖರೀದಿಸಲು ಜಿಲ್ಲೆಯಲ್ಲಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ರೈತರು ಖರೀದಿ ಕೇಂದ್ರಗಳಲ್ಲಿ ನೊಂದಾಯಿಸಿ ಸೂರ್ಯಕಾಂತಿ ಮಾರಾಟ ಮಾಡಿ ಸರ್ಕಾರದ ಯೋಜನೆಯ ಸದುಪಯೋಗ ಪಡಿಡಿಸಕೊಳ್ಳುವಂತೆ ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಎಸ್.ಪೂವಿತಾ ಅವರು ಕೋರಿದ್ದಾರೆ.**



ಸೂರ್ಯಕಾಂತಿ ಉತ್ಪನ್ನವನ್ನು ಪ್ರತಿ ಎಕರಿಗೆ 4 ಕ್ವಿಂಟಾಲ್ ಹಾಗೂ ಪ್ರತಿ ರೈತ–ರಿಂದ ಗರಿಷ್ಠ 20 ಕ್ವಿಂಟಾಲ್ ಎಫ್.ಎ.ಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಾಲ್‌ಗೆ 7,721ರೂ. ಗಳಂತೆ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿಸಲಾಗುವುದು. ದಿನಾಂಕಃ07–05–2026 ರಿಂದ ರೈತರ ನೊಂದಣಿ ಕಾಲಾವಧಿಯನ್ನು 50 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 60 ದಿನಗಳವರೆಗೆ ನಿಗಧಿಪಡಿಸಿದೆ.

ಖರೀದಿ ಕೇಂದ್ರಗಳು: ರಾಯಚೂರು ತಾಲೂಕಿನ ಹುಣಸಿಹಾಳ ಹುಡಾ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಷಣ್ಮುಖ ಜಿ. ಮೊಬೈಲ್ ಸಂಖ್ಯೆ: 9743695467, ದೇವದುರ್ಗ ತಾಲೂಕಿನ ಜಾಲಹಳ್ಳಿ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ನರಸಿಂಗ ನಾಯಕ ಮೊಬೈಲ್ ಸಂಖ್ಯೆ: 7899312989, ಲಿಂಗಸಗೂರು ತಾಲೂಕಿನ ಮಟ್ಟೂರು ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಮಲ್ಲಿಕಾರ್ಜುನ ದೇಸಾಯಿ ಮೊಬೈಲ್ ಸಂಖ್ಯೆ: 7337773317,

ಹಟ್ಟಿ ರಾಷ್ಟ್ರೀಯ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಸಾಗರ್ ಮೊಬೈಲ್ ಸಂಖ್ಯೆ: 9980903420, ಮಸ್ಕಿ ತಾಲೂಕಿನ ಮೆದಕಿನಾಳ ರಾಷ್ಟ್ರೀಯ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಕೊಟ್ರಪ್ಪ ಮೊಬೈಲ್ ಸಂಖ್ಯೆ: 9663704929, ಸಿಂಧನೂರು ತಾಲೂಕಿನ ಜವಳಗೇರಾ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ದೇವರಾಜ ಮೊಬೈಲ್ ಸಂಖ್ಯೆ: 9964165509, ಹುಡಾ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಚನ್ನನಗೌಡ ಮೊಬೈಲ್ ಸಂಖ್ಯೆ: 9964315868, ಪಗಡದಿನ್ನಿ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಮಲ್ಲಿಕಾರ್ಜುನ ಮೊಬೈಲ್

ಸಂಖ್ಯೆ: 9945738297, ಮಾನವಿ ತಾಲೂಕಿನ ತೋರಣದಿನ್ನಿ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಬಸಯ್ಯ .ಟಿ ಮೊಬೈಲ್ ಸಂಖ್ಯೆ: 9902387316, ಸಿರವಾರ ತಾಲೂಕಿನ ಸಿರವಾರ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ನಿಂಬಯ್ಯ ಸ್ವಾಮಿ ಮೊಬೈಲ್ ಸಂಖ್ಯೆ: 9880891919, ಹರವಿ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ವೀರೇಶ್ ಮೊಬೈಲ್ ಸಂಖ್ಯೆ: 7899964173ಗೆ ರೈತರು ಸಂಪರ್ಕ ಮಾಡಬಹುದಾಗಿದೆ. ರೈತರ ಬಾಂಧವರು ಫ್ರೂಟ್ಸ್ ಐ.ಡಿ ಯೊಂದಿಗೆ ತಮ್ಮ ಹತ್ತಿರದ ಖರೀದಿ ಕೇಂದ್ರಗಳಲ್ಲಿ ನೊಂದಾಯಿಸಿ ಸೂರ್ಯಕಾಂತಿ ಮಾರಾಟ ಮಾಡಿ ಸರ್ಕಾರದ ಯೋಜನೆಯ ಸದುಪಯೋಗ ಪರಿಡಿಸಕೊಳ್ಳುವಂತೆ ಜಿಲ್ಲೆಯ ರೈತ ಬಾಂಧವರಲ್ಲಿ ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲೆಯ ಜಿಲ್ಲಾಧಿಕಾರಿ ಎಸ್.ಪೂವಿತಾ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಭಾರಿ ಮಳೆ ಸುರಿದು ಅಪಾರ ಹಾನಿ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ತಾಲ್ಲೂಕಿನ ಗಡಿಸೋಮನಾಳ ತಾಂಡಾ 1 (ವಿಶ್ವ ನಗರ)ದಲ್ಲಿ ಗುರುವಾರ ಸಂಜೆ ಸುರಿದ ಮಳೆ, ಬಿರುಗಾಳಿಗೆ ಅಪಾರ ಹಾನಿ ಸಂಭವಿಸಿದೆ. ಗ್ರಾಮದ ಅಂಗನವಾಡಿ ಸಮೀಪ ಹಾಗೂ ಹಲವೆಡೆ ಮರಗಳ ಕೊಂಬೆಗಳು ಮುರಿದು ಬಿದ್ದಿವೆ.**



ಕುಡಿಯುವ ನೀರು ಪೂರೈಸುವ ಬೋವೆಲ್ ಬಳಿಯಮೋಟಾರ್, ವಿದ್ಯತ್ ಪರಿರ್ತಕ(ಟಿಸಿ), ಅನೇಕ ಮನೆಗಳ ಮೇಲಿನ ಪತ್ರಾಸ್, ಶಾಲೆಯ ಮೇಲಿನ ನೀರಿನ ಸಿಂಟೆಕ್ಸ್ ಗಾಳಿಗೆ ಹಾರಿಹೋಗಿವೆ. ಮರಗಳು ವಿದ್ಯುತ್ ತಂತಿಗಳ ಮೇಲೆಯೇ ವಾಲಿದ್ದು. ವಿದ್ಯುತ್ ಕಂಬಗಳು ಸಹ ವಾಲಿವೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ ತಾಲ್ಲೂಕಿನಲ್ಲಿ ಮಳೆಯಿಂದಾಗಿ ಯಾವುದೇ ಜೀವಹಾನಿಯ ಬಗ್ಗೆ ವರದಿಗಳು ಬಂದಿಲ್ಲವೆಂದು ತಹಶೀಲ್ದಾರ ಡಾ.ವಿನಯಾ ಹೂಗಾರ ತಿಳಿಸಿದ್ದಾರೆ.

## ಹಗಲು 10 ಗಂಟೆ ವಿದ್ಯುತ್ ನೀಡುವಂತೆ ಆಗ್ರಹಿಸಿ ಮನವಿ



❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಬೊಮ್ಮನಹಳ್ಳಿ, ಗುಡ್ನಾಳ, ಬೋಳವಾಡ, ಪತ್ತೇಪೂರ, ಹೊಸಳ್ಳಿ ಹಾಗೂ ತುಂಬಗಿ ಸೇರಿದಂತೆ ವಿವಿಧ ಗ್ರಾಮಗಳ ರೈತರಿಗೆ ವಿದ್ಯುತ್ ಸರಬರಾಜು ಸರಿಯಾಗಿ ಆಗದೇ ಇರುವದರಿಂದ ತುಂಬಾ ತೊಂದರೆಯಾಗುತ್ತಿದ್ದು ಇದನ್ನು ತಪ್ಪಿಸಲು ಹಗಲು ಹೊತ್ತಿನಲ್ಲಿ10 ಗಂಟೆಗಳ ಕಾಲ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡಬೇಕೆಂದು ಆಗ್ರಹಿಸಿ ಅಖಂಡ ಕರ್ನಾಟಕ ರೈತ ಸಂಘ ತಾಲೂಕ ಘಟಕದ ಪದಾಧಿಕಾರಿಗಳು ಹೆಸ್ಕಾಂ ಸಹಾಯಕ ಅಭಿಯಂತರ ಶಿವನಗೌಡ ಪಾಟೀಲ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.**

ಈ ವೇಳೆ ಅಖಂಡ ಕರ್ನಾಟಕ ರೈತ ಸಂಘ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಅವರು ಮಾತನಾಡಿ ರೈತರ ಕೃಷಿ ಪಂಪ್ ಸಟ್ಟುಗಳಿಗೆ ದಿನಕ್ಕೆ 7 ತಾಸುಗಳವರೆಗೆ ವಿದ್ಯುತ್ ನೀಡುವುದಾಗಿ ಹೇಳಿದ ಹೆಸ್ಕಾಂ ಇಲಾಖೆಯು ಕೇವಲ 2 ತಾಸು ಮಾತ್ರ ವಿದ್ಯುತ್ ಸರಬರಾಜು ಮಾಡುತ್ತಿದೆ ಇದ–ರಿಂದ ರೈತರಿಗೆ ತುಂಬಾ ತೊಂದರೆ ಆಗುತ್ತಿದ್ದು ಅಲ್ಪ–ಸ್ವಲ್ಪ ಬೆಳೆದು ನಿಂತ ಬೆಳೆಗಳು ನೀರಿಲ್ಲದೆ ಒಣಗಿ ಹೋಗುತ್ತಿದ್ದು ರೈತರು ಕಂಗಾಲಾಗಿ ಸಾಲದ ಸುಳಿಗೆ ಸಿಲುಕಿಕೊಂಡಿದ್ದಾರೆ. ನಮ್ಮ ಜಿಲ್ಲೆಯಲ್ಲಿಯೇ ಉಷ್ಣ ಸ್ಥಾವರ ವಿದ್ಯುತ್ ಘಟಕ ಇದ್ದರೂ ಅದರಿಂದ ಉತ್ಪಾದಿಸಿದ ವಿದ್ಯುತ್ ರೈತರಿಗೆ ನೀಡದೇ ಕೈಗಾರಿಕೆಗಳಿಗೆ ಕೊಡಲಾಗುತ್ತಿದೆ, ಯಾವ ಸರ್ಕಾರಗಳಿಂದಲೂ ರೈತರಿಗೆ ನ್ಯಾಯ ಸಿಗುತ್ತಿಲ್ಲ ಎಂದ ಅವರು ಇನ್ನು ಮುಂದೆ ಅಧಿಕಾರಿಗಳು ತಾಲೂಕಿನ ಈ ಎಲ್ಲ ಗ್ರಾಮಗಳ ರೈತರ ಪಂಪ್ ಸಟ್ಟುಗಳಿಗೆ ಹಗಲು ಹೊತ್ತಿನಲ್ಲಿ ಹತ್ತು ಗಂಟೆಗಳ ಕಾಲ ನಿರಂತರವಾಗಿ ವಿದ್ಯುತ್ತನ್ನು ಸರಬರಾಜು ಮಾಡಬೇಕು.

ಈ ಗಂಭೀರ ಸಮಸ್ಯೆಯನ್ನು ಒಂದೆರಡು ದಿನಗಳಲ್ಲಿ ಪರಿಹ–ರಿಸದೆ ಹೋದಲ್ಲಿ ಸಂಘಟನೆ ವತಿಯಿಂದ ಉಗ್ರವಾದ ಹೋರಾಟವನ್ನು ನಡೆಸುವುದು ಅನಿವಾರ್ಯವಾಗುತ್ತದೆ ಅದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ತಿಳಿಸಿದರು. ಈ ಸಮಯದಲ್ಲಿ ಅಖಂಡ ಕರ್ನಾಟಕ ರೈತ ಸಂಘದ ತಾಲೂಕ ಅಧ್ಯಕ್ಷ ಬಾಳಪ್ಪಗೌಡ ಲಿಂಗದಳ್ಳಿ, ಉಪಾಧ್ಯಕ್ಷ ರಾಮನಗೌಡ ಹಾದಿಮನಿ, ಪದಾಧಿಕಾರಿಗಳಾದ ಬಸವರಾಜ ಮಸರಕಲ್ಲ, ಶರಣಪ್ಪ ಕಲ್ಬುರ್ಗಿ, ಭೀಮಣ್ಣ ಕಲ್ಲದೇವನಹಳ್ಳಿ, ನಿಂಗಪ್ಪ ಕಲಬುರ್ಗಿ, ಜಗದೀಶ ದೇಸಾಯಿ, ಶಿವಪುತ್ರಪ್ಪ ಕಟ್ಟಿಮನಿ, ಪರಶುರಾಮ ದೋರನಹಳ್ಳಿ, ನಿಂಗನಗೌಡ ಕೋಳೂರ, ಶರಣಬಸಪ್ಪ ಚಿಂಚೋಳಿ, ನಿಂಗಪ್ಪ ರಸ್ಕಸಗಿ, ಗುರುರಾಜ ಕಲಬುರ್ಗಿ ಮತ್ತಿತರರು ಇದ್ದರು.

## ಕಾರುಣ್ಯಾಶ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಹಡಪದ ರೇಚಣ್ಣ ವಿವಿದೋದ್ದೇಶ ಸಹಕಾರ ಸಂಘ ಸಿಂಧನೂರಿನ ನಿರ್ದೇಶಕರಾದ ಸಿದ್ದಲಿಂಗಮ್ಮ ಅಮರೇಶ ಕಾನಿಹಾಳ ಹಾಗೂ ಲಲಿತಾ ಆದೇಶ ಕಾನಿಹಾಳ ಈ ದಂಪತಿಗಳ 15ನೇ ವರ್ಷದ ವಿವಾಹ ವಾರ್ಷಿಕೋತ್ಸವ ಸಮಾರಂಭ ಕಾರ್ಯಕ್ರಮವು ಎಸ್ ಎಸ್.ಎಲ್. ಸಿ. ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿರುವ ಸುಮಾರು 20ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಮೂಲಕ ಗೌರವಿಸಿ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತ–ರಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿತು.**



ಈ ಕಾರ್ಯಕ್ರಮದಲ್ಲಿ ಬಸವ ಬಳಗ ಸಿಂಧನೂರು ಸಮಸ್ತ ಹಡಪದ ಸಮಾಜ ರಾಯಚೂರು ಜಿಲ್ಲಾ ಹಾಗೂ ಭಾರತೀಯ ಜನತಾ ಪಾರ್ಟಿ ಸಿಂಧನೂರು ಮತ್ತು ಸಿಂಧನೂ–ರಿನ ವಿವಿಧ ಸಂಘ ಸಂಸ್ಥೆಗಳಿಂದ ಸಿದ್ದಲಿಂಗಮ್ಮ ಅಮರೇಶಪ್ಪ ಕಾನಿಹಾಳ ಹಾಗೂ ಲಲಿತಾ ಆದ–ೇಶ ಕಾನಿಹಾಳ ಈ ದಂಪತಿಗಳನ್ನು ಸನ್ಮಾನಿಸಿ ಗೌರವಿಸಿ ಶುಭ ಕೋರಿದರು. ಈ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದ ಸಿಂಧನೂರು ಬಸವ ಕೇಂದ್ರದ ಬಸವಲಿಂಗಪ್ಪ ಬಾದರ್ಲಿ ಮಾತನಾಡಿ ಈ ಶರಣ ದಂಪತಿಗಳು ತಮ್ಮಗಳ ವಿವಾಹ ವಾರ್ಷಿಕೋತ್ಸವದ ಜೊತೆಗೆ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಿ ಪ್ರೋತ್ಸಾಹಿಸುವುದು ಸಮಾಜಕ್ಕೆ ಉತ್ತಮ ಸಂದೇಶವಾಗಿದೆ. ಬಸವಣ್ಣನವರ ಆಶಯದಂತೆ ಅವರ ಆದರ್ಶದಂತೆ ಕಾನಿಹಾಳದ ಹಡಪದ ಸಮಾಜ ಆದರ್ಶ ಕುಟುಂಬವಾಗಿದೆ.

ಮತ್ತು ವಿಶೇಷವಾಗಿ ಕಾರುಣ್ಯದಂತಹ ಕರುಣೆಯ ಕುಟುಂಬದಲ್ಲಿ ಈ ಕಾರ್ಯಕ್ರಮ ಅರ್ಥಪೂರ್ಣ. ಮತ್ತು ನಮ್ಮ ಹರೇಟನೂರಿನ ಜಂಗಮ ಕುಟುಂಬ ಅದೆಷ್ಟೋ ಅಂದ ಅನಾಥರ ಬಾಳಿಗೆ ತಮ್ಮ ಜೋಳಿಳಿಗೆಯ ಮೂಲಕ ಬದುಕು ಕಟ್ಟಿ ಕೊಟ್ಟಿರುವುದು ಅಪ್ಪ ಬಸವಣ್ಣನವರ ಭಕ್ತಿಯ ಪ್ರೀತಿಗೆ ಕಾರಣವಾಗಿದೆ ಎಂದು ಮಾತನಾಡಿದರು.

ನಂತರ ಬಿಜೆಪಿಯ ಮುಖಂಡರಾದ ಮಲ್ಲಿಕಾರ್ಜುನ ಜೀನೂರು ಮಾತನಾಡಿ ಸರ್ವ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸುವ ಈ ಕಾರ್ಯಕ್ರಮ ಶ್ಲಾಘನೀಯವಾಗಿದೆ.

ಸಮಾಜ ನಮಗೇನು ಕೊಟ್ಟಿದೆ ಎನ್ನುವುದಕ್ಕಿಂತ ನಾವು ಸಮಾಜಕ್ಕಾಗಿ ಏನು ಕೊಟ್ಟಿದ್ದೇವೆ ಎನ್ನುವುದು ನಾವೆಲ್ಲರೂ ಅರ್ಥ ಮಾಡಿಕೊಂಡು ಇಂತಹ ಕಾರ್ಯಕ್ರಮಗಳನ್ನು ರೂಪಿಸಿದಾಗ ಮಾತ್ರ ಸಮಾಜದ ಋಣ ತೀ–ರಿಸಲು ಸಾಧ್ಯ ಸುದೀರ್ಘ 15 ವರ್ಷಗಳ ಜೀವನದ ಹಲವಾರು ಅನುಭವಗಳೊಂದಿಗೆ ಈ ದಂಪತಿಗಳು ನಮ್ಮ ಸಮಾಜಕ್ಕೆ ಆದರ್ಶ ದಂಪತಿಗಳಾಗಿದ್ದಾರೆ. ಇವರಿಗೂ ಹಾಗೂ ಇವರ ಕುಟುಂಬಕ್ಕೂ ಆ ಭಗವಂತನ ಶುಭಾಶಯಗಳು ಸದಾವಕಾಲವಿರುತ್ತದೆ ಎಂದು ನಾವೆಲ್ಲರೂ ಪ್ರಾರ್ಥಿಸೋಣ ಎಂದು ಮಾತನಾಡಿ ಶುಭ ಹಾರೈಸಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಹೆಚ್.ಹಂಪಣ್ಣ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಿಂಧನೂರು. ಗದ್ದೆಪ್ಪ ಜಕ್ಕೇರಮಡು. ರಾಜ್ಯ ಕಾರ್ಯಾಧ್ಯಕ್ಷರು ಹಡಪದ ಸಮಾಜ. ಶಿವಬಸನಗೌಡ ಬಿಜೆಪಿ ಮುಖಂಡರು ಗೊರೇಬಾಳ ನಿಜಗುಣ ಸಿಂಧನೂರು. ಸಾವಿತ್ರಿ ಬಸವಲಿಂಗಪ್ಪ ಬಾದರ್ಲಿ ಸಿಂಧನೂರು. ಮಲ್ಲಿಕಾರ್ಜುನ ಜೀನೂರು ಬಿಜೆಪಿ ಮುಖಂಡರು ಸಿಂಧನೂರು.ಬಸವರಾಜ ಹರವಿ ಜಿಲ್ಲಾಧ್ಯಕ್ಷರು ಹಡಪದ ಅಪ್ಪಣ್ಣ ಸಮಾಜ ರಾಯಚೂರು. ಶರಣಪ್ಪ ಕುರುಕುಂದ ಬಸವ ಕೇಂದ್ರ ಸಿಂಧನೂರು. ಶಿವರಾಮಮೂರ್ತಿ ಬಿಜೆಪಿ ಮುಖಂಡರು ಸಿಂಧನೂರು.

ವೀರಭದ್ರಪ್ಪ ಚೌಡಾಪುರ. ಶರಣಬಸವ ಸಿರವಾರ ಸಿದ್ದಲಿಂಗಮ್ಮ ಅಮರೇಶಪ್ಪ ಕಾನಿಹಾಳ. ಲಲಿತಾ ಆದೇಶ ಕಾನಿಹಾಳ. ರಮೇಶ ಕಾನಿಹಾಳ ಹಡಪದ ಸಮಾಜದ ಮುಖಂಡರು. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತಾ ಮಲದಗುಡ್ಡ ಸಿದ್ದಯ್ಯ ಸ್ವಾಮಿ ಮರಿಯಪ್ಪ ಜ್ಯೋತಿ ಮೀನಾಕ್ಷಮ್ಮ. ಬಸವ ಸ್ವಾಮಿ ಹಾಗೂ ಹಡಪದ ಸಮಾಜದ ಹಲವಾರು ಗುರು ಹಿರಿಯರು ಮತ್ತು ಕಾನಿಹಾಳ ಕುಟುಂಬದ ಹಲವಾರು ಸದಸ್ಯರು ಉಪಸ್ಥಿತರಿದ್ದರು

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಐ ಟಿ ಐ ಕೋಪಾ

ITI COPA (Computer Operator & Programming Assistant) is a 1-year vocational course covering computer fundamentals, data entry, office software (MS Office, Tally), web design, and basic programming. Eligibility is a 10th-pass. It provides a National Trade Certificate (NTC) for Data Entry and IT Assistant jobs.ಕೋರ್ಸ್‌ನ ವಿವರಗಳು (Course Details)ಕೋರ್ಸ್‌ನ ಹೆಸರು: ಕಂಪ್ಯೂಟರ್ ಆಪರೇಟರ್ ಮತ್ತು ಪ್ರೋಗ್ರಾಮಿಂಗ್ ಅಸಿಸ್ಟೆಂಟ್ (COPA)ಅವಧಿ (Duration): 1 ವರ್ಷ (2 ಸೆಮಿಸ್ಟರ್‌ಗಳು)ಅರ್ಹತೆ (Eligibility): 10ನೇ ತರಗತಿ ಉತ್ತೀರ್ಣಪ್ರಮಾಣಪತ್ರ (Certificate): National Trade Certificate (NTC) - NCVT/ SCVT ಮಾನ್ಯತೆಪಠ್ಯಕ್ರಮ (Syllabus) ಈ ಕೋರ್ಸ್‌ನಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಪ್ರಾಯೋಗಿಕ ಮತ್ತು ಸೈದ್ಧಾಂತಿಕ ತರಬೇತಿ ನೀಡಲಾಗುತ್ತದೆ:ಮೂಲಭೂತ ಕಂಪ್ಯೂಟರ್ ಜ್ಞಾನ: ಆಪರೇಟಿಂಗ್ ಸಿಸ್ಟಮ್‌ಗಳು (Windows/Linux) ಮತ್ತು ಹಾರ್ಡ್‌ವೇರ್ ಪರಿಕಲ್ಪನೆಗಳು.ಕಚೇರಿ ಸಾಫ್ಟ್‌ವೇರ್: MS Word, MS Excel, MS PowerPoint, MS Access.ವೆಬ್ ವಿನ್ಯಾಸ: HTML, CSS, ಮತ್ತು JavaScript. ಅಕೌಂಟಿಂಗ್: GST ಜೊತೆಗೆ Tally.ಡೇಟಾ ನಿರ್ವಹಣೆ ಮತ್ತು ಭದ್ರತೆ: ಸೈಬರ್ ಭದ್ರತೆ (Cyber Security) ಮತ್ತು ಇಂಟರ್ನೆಟ್ ಬ್ರೌಸಿಂಗ್.ಉದ್ಯೋಗಾವಕಾಶಗಳು (Career Opportunities)ಕೋರ್ಸ್ ಮುಗಿದ ನಂತರ ಅಭ್ಯರ್ಥಿಗಳು ಕೆಳಗಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು:ಡೇಟಾ ಎಂಟ್ರಿ ಆಪರೇಟರ್ (Data Entry Operator)ಕಂಪ್ಯೂಟರ್ ಆಪರೇಟರ್ (Computer Operator)ಕಚೇರಿ ಸಹಾಯಕ (Office Assistant) ವೆಬ್ ಡೆವಲಪರ್ (Web Designer/Developer)ಅಕೌಂಟೆಂಟ್ (Tally Operator/Accountant)ಪ್ರವೇಶಕ್ಕಾಗಿ ಲಿಂಕ್‌ಗಳು (Admission & Search) ಕರ್ನಾಟಕದಲ್ಲಿರುವ ಸರ್ಕಾರಿ ಅಥವಾ ಖಾಸಗಿ ITI ಕಾಲೇಜುಗಳಲ್ಲಿ ಪ್ರವೇಶ

## ಜನಪದ ಕಲೆಗಳಿಂದ ನೈತಿಕ ಮೌಲ್ಯಗಳ ಬೆಳವಣಿಗೆ ಸಾಧ್ಯ: ರಂಗಪ್ಪ ಮಾಸ್ತರ್

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಉಟಕನೂರು ಗ್ರಾಮದ ಶ್ರೀ ಅಡವಿಸಿದ್ದೇಶ್ವರ ಮಠದ ಆವರಣದಲ್ಲಿ ಶ್ರೀ ಏಕಲವ್ಯ ದೊಡ್ಡಾಟ ಸಂಘ ತಡಕಲ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಯಚೂರು ಇವರ ಗಿರಿಜನ ಉಪಯೋಜನೆ ಅಡಿಯಲ್ಲಿ ಅಯೋಜಿಸಲಾದ ವಚನ ವೈಭವ ಕಾರ್ಯಕ್ರಮವನ್ನು ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ರಂಗಪ್ಪ ಮಾಸ್ತರ್ ತಡಕಲ್ ಮಾತನಾಡಿ ಗ್ರಾಮೀಣ ಭಾಗದ ಜನಪದ ಕಲಾವಿದರ ಶ್ರಮ, ಪ್ರತಿಭೆಗಳಿಗೆ ಸರಕಾರ ಬೆಂಬಲ ನೀಡಿದಾಗ ಮಾತ್ರ ಜನಪದ ಕಲೆಗಳು ಉಳಿಯುವುದಕ್ಕೆ ಸಾಧ್ಯ,**




ಜನಪದ ಕಲಾ ಪ್ರಕಾರಗಳು ಮನರಂಜನೆಯ ಜೋತೆಗೆ ಜನರಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವ ಕಾರ್ಯವನ್ನು ಮಾಡುತ್ತವೆ. 12 ನೇ ಶತಮಾನದಲ್ಲಿನ ಬಸವಾದಿ ಶರಣರ ವಿಚಾರಧಾರೆಗಳನ್ನು ವಚನ ಸಾಹಿತ್ಯದ ಮೂಲಕ ನಮ್ಮಗೆ ಕಟ್ಟಿಕೊಟ್ಟಿದ್ದಾರೆ ವಚನಗಳು ಕೇವಲ ಅಕ್ಷರಗಳಲ್ಲ, ಅವುಗಳು ನಮ್ಮ ಬದುಕಿಗೆ ದಾರಿದೀಪಗಳಾಗಿವೆ. ವಚನಗಳನ್ನು ಜನಪದ ಸಾಂಸ್ಕೃತಿಕ ಕಲೆಗಳ ಮೂಲಕ ಜನಸಾಮಾನ್ಯರಿಗೆ ತಲುಪಿಸುವುದಕ್ಕೆ ವಚನ ವೈಭವ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದು ತಿಳಿಸಿದರು. ಬಸವಣ್ಣ, ಅಕ್ಕಮಹಾದೇವಿ, ಸರ್ವಜ್ಞ ಹಾಗೂ ಅಲ್ಲಮಪ್ರಭುಗಳ ಆಯ್ದ ವಚನಗಳನ್ನು ಗವಾಯಿ ಹನುಮಂತ್ರಾಯ ಚಿಕ್ಕಕೊಟ್ನೆಕಲ್ ಹಾಡಿದರು, ನಿಜಗುಣ ಭೋಗಾವತಿ ತಬಲಸಾಥ್ ನೀಡಿದರು, ತಡಕಲ್‌ನ ಶ್ರೀ ಏಕಲವ್ಯ ದೊಡ್ಡಾಟ ಸಂಘ ಹಾಗೂ ಸ್ಥಳೀಯ ಕಲಾವಿದರು ವಚನ ಸಾಹಿತ್ಯ ಮತ್ತು ಜಾನಪದ ಕಲೆಗಳನ್ನು ಪ್ರದರ್ಶಿಸಿದರು, ರಾಮಲಿಂಗೇಶ್ವರ ಭಜನಾ ಸಂಘದಿಂದ ತತ್ವಪದ ಗಾಯನ, ಹಾಗೂ ವಚನ ಗಾಯನ, ಸಿಂಧನೂರಿನ ವೀರಗಾಸೆ ಕಲಾ ತಂಡದ ಬಸವರಾಜ ವೀರಗಾಸೆ ಕಲೆಯನ್ನು ಪ್ರದರ್ಶಿಸಿದರು. ರಮೇಶ್ ಹಸಮಕಲ್ ಚಿಲಿಪಿಲಿಗೊಂಬೆ ತಂಡದಿಂದ ಗೊಂಬೆ ಕಲೆ ಪ್ರದರ್ಶನ, ಸಿದ್ದಪ್ಪ ತಡಕಲ್ ತಂಡದಿಂದ ಹಲಗೀಮೇಳ, ಅಯ್ಯಪ್ಪ ಮಲ್ಲದಗುಡ್ಡ ತಂಡದಿಂದ ಡ್ರಮ್ಸ್ ಸೆಟ್ ಪ್ರದರ್ಶನ ಸೇರಿದಂತೆ. ಈ ಕಾರ್ಯಕ್ರಮದಲ್ಲಿ ಮುದುಕಯ್ಯ ತಾತ ಉಟಕನೂರು, ರಂಗಯ್ಯ ತಾತ ಬುದ್ದಿನ್ನಿ, ಕಲ್ಯಾಣ ಕರ್ನಾಟಕ ಕಲಾವಿದರ ಸಂಘದ ಜಿಲ್ಲಾ ಸಂಚಾಲಕರಾದ ಶರಣಪ್ಪ ನಾಯಕ ತಡಕಲ್ , ಭೀಮಣ್ಣ ಮಾಸ್ತರ್ ಉದ್ಬಾಳ್, ದುರುಗಪ್ಪ ಉಪನ್ಯಾಸಕರು ತಡಕಲ್, ಗುರುಪ್ರತಾಪ್ ಗೌಡ ದದ್ದಲ್ ,ಡಾ. ಬಸವರಾಜಪ್ಪ ಪೋತ್ನಾಳ, ಶಿವರಾಜಪ್ಪ ಧಣಿ ಜೀನೂರ್, ಭೀಮಣ್ಣ ಮಾಸ್ಟರ್ ಉದ್ಬಾಳ್,ಮುದುಕಪ್ಪ ಮರಡ್ಡಿ ತಡಕಲ್, ಅಮರೇಶ್ ಹಸಮಕಲ್, ಅಮರೇಶ್ ಪೂಜಾರಿ ವಲ್ಕಮ್ ದಿನ್ನಿ, ಯಂಕೋಬ ಮಾಸ್ತರ್ ಗೋನವರ, ಶಾಂತಮ್ಮ ಹಸಮಕಲ್, ಯಲ್ಲಮ್ಮ ಜಿನ್ನಾಪುರ, ಯಂಕನಗೌಡ ಪೇಟಿ ಗೌಡ ದಿದ್ದಿಗಿ, ಸಿದ್ದಪ್ಪ ಪೂಜಾರಿ ಉಟಕನೂರು, ಪ್ರಾಣೇಶ್ ಪೂಜಾರಿ, ಅಮರೇಶ್ ಹೆಬ್ಬಾಳ ಉಟಕನೂರು, ಯಂಕಪ್ಪ ಉಟಕನೂರು, ಶರಣೆಗೌಡ ಮರಕಮದಿನ್ನಿ, ಶರಣಪ್ಪ ದೇವರಮನಿ ಮರಕಮದಿನ್ನಿ, ಬಸಣ್ಣ ಬನ್ನಿಗನೂರು, ಸೇರಿದಂತೆ ಗ್ರಾಮಸ್ಥರು ಇದ್ದರು.

# ವಿಬಿಜಿ ರಾಮ್ ಜಿ ತೊಲಗಿಸಿ ಮನರೇಗಾ ಉಳಿಸಿ: ಜಾಲಹಳ್ಳಿ ಕೃಷಿ ಕೂಲಿಕಾರರ ಸಂಘಟನೆ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯತ್ ಕಾರ್ಯಾಲಯದಲ್ಲಿ ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘ ಜಾಲಹಳ್ಳಿ ಘಟಕದ ವತಿಯಿಂದ "ವಿಬಿಜಿ ರಾಮ್ ಜಿ ಯೋಜನೆ ತೊಲಗಿಸಿ ಮನರೇಗಾ ಯೋಜನೆಯನ್ನು ಉಳಿಸಬೇಕು" ಎಂದು ಒತ್ತಾಯಿಸಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು. ಗ್ರಾಮ ಪಂಚಾಯತ್ ಬಿಲ್ ಕಲೆಕ್ಟರ್ ವೆಂಕೋಬ ಅವರು ಮನವಿ ಸ್ವೀಕರಿಸಿದರು.**

ಸಂಘದ ಮುಖಂಡ ಲಿಂಗಣ್ಣನಾಯಕ್ ಮಕಾಶಿ ಮಾತನಾಡಿ, ಕೇಂದ್ರ ಸರ್ಕಾರವು ಮನರೇಗಾ ಕಾಯ್ದೆಯನ್ನು ದುರ್ಬಲಗೊಳಿಸಿ ವಿಬಿಜಿ ರಾಮ್ ಜಿ ಯೋಜನೆ ಜಾರಿಗೆ ತರಲು ಮುಂದಾಗಿರುವುದು ಗ್ರಾಮೀಣ ಕೃಷಿ ಕೂಲಿಕಾರರ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದು ಆರೋಪಿಸಿದರು. ಯುಪಿಎ ಸರ್ಕಾರದ ಅವಧಿಯಲ್ಲಿ ಗ್ರಾಮೀಣ ಬಡ ಕೂಲಿಕಾರರ



ಜೀವನೋಪಾಯಕ್ಕಾಗಿ ಜಾರಿಯಾದ ಮನರೇಗಾ ಯೋಜನೆ ಮಹಿಳಾ ಸಬಲೀಕರಣ ಹಾಗೂ ಸಮಾನ ಕೆಲಸಕ್ಕೆ ಸಮಾನ ಕೂಲಿ ವ್ಯವಸ್ಥೆಗೆ ಸಹಕಾರಿಯಾಗಿದೆ ಎಂದು ಹೇಳಿದರು.

ಕರ್ನಾಟಕ ಸರ್ಕಾರ ಮನರೇಗಾ ಯೋಜನೆಯನ್ನು ಉಳಿಸುವ ಕುರಿತು ವಿಧಾನಸಭೆಯಲ್ಲಿ ನಿರ್ಣಯ ಕೈಗೊಂಡಿದ್ದರೂ, ಕೂಲಿಕಾರರಿಗೆ ಸಮರ್ಪಕ ಕೆಲಸ ನೀಡಲಾಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಂಘಟನೆ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿತು:

1. ಕೃಷಿ ಕೂಲಿಕಾರರಿಗೆ ತಕ್ಷಣದಿಂದಲೇ ಕೆಲಸ ನೀಡಬೇಕು ಹಾಗೂ ಬಾಕಿ ಕೂಲಿಯನ್ನು ಪಾವತಿಸಬೇಕು.
2. ಕೇಂದ್ರ ಸರ್ಕಾರದಿಂದ 60% ಅನುದಾನ ಬಿಡುಗಡೆ ಮಾಡಬೇಕು.
3. ಕಾಯಕ ಬಂಧುಗಳ ಬಾಕಿ ಪ್ರೋತ್ಸಾಹಧನವನ್ನು ಕೂಡಲೇ ಚುಕ್ತಾ ಮಾಡಬೇಕು.
4. ಓಒಖ ಮತ್ತು ಇ-ಏಜಅ ತಂತ್ರಜ್ಞಾನಗಳ ಅವ್ಯವಸ್ಥೆಯನ್ನು ಕೈಬಿಟ್ಟು ಸರಳ ರೀತಿಯಲ್ಲಿ ಕೂಲಿಕಾರರ ಹಾಜರಾತಿ ವ್ಯವಸ್ಥೆ ಜಾರಿಗೊಳಿಸಬೇಕು.

ಹಾಗೂ ಇನ್ನೂ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಜಾಲಹಳ್ಳಿ ಕೃಷಿ ಕೂಲಿಕಾರರ ಹಾಗೂ ಕಾರ್ಮಿಕರ ಸಂಘಟನೆ ಪದಾಧಿಕಾರಿಗಳು ಒತ್ತಾಯಿಸಿದರು.

ಈ ಸಂಬಂಧ ಜಾಲಹಳ್ಳಿ ಸೇರಿದಂತೆ ಮಸರಕಲ್, ಕರಡಿಗುಡ್ಡ ಹಾಗೂ ಪಲಕನಮರಡಿ ಗ್ರಾಮ ಪಂಚಾಯತಿಗಳಲ್ಲಿಯೂ ಮನವಿ ಪತ್ರ ಸಲ್ಲಿಸಲಾಯಿತು. ಜಾಲಹಳ್ಳಿಯಲ್ಲಿ ಗ್ರಾಮ ಘಟಕ ಅಧ್ಯಕ್ಷ ಶರಣಪ್ಪ ನಾಯಕ ಕಾರಲಕುಂಟಿ, ಕಾರ್ಯದರ್ಶಿ ಚಂದ್ರಶೇಖರ ನಾಯಕ, ಸುರೇಶ್ ಗೌಡ, ನರೇಶ್ ಕುರುಕುಂದಿ, ಆನಂದ, ತಮ್ಮಣ್ಣ, ರಾಜ್ ಮಹಮ್ಮದ್ ಕಾಲೇಗಾರ್ ಸೇರಿದಂತೆ ಹಲವರು ಭಾಗವಹಿಸಿದ್ದರು. ಕರಡಿಗುಡ್ಡ ಗ್ರಾಮದಲ್ಲಿ ಹೇರುಂಡಿ ಗ್ರಾಮ ಘಟಕದ ಶಿವಪ್ಪ, ಕಾರ್ಯದರ್ಶಿ ದೇವಮ್ಮ, ತಾಲ್ಲೂಕು ಅಧ್ಯಕ್ಷ ಲಿಂಗಣ್ಣ ಮಕಾಶಿ, ಜಿಲ್ಲಾ ಕಾರ್ಯದರ್ಶಿ ಸಂಗಮೇಶ ಮೂಲಿಮನಿ, ಮಲ್ಲಣ್ಣ, ಮೌನೇಶ ಸೇರಿದಂತೆ ನೂರಾರು ಕೂಲಿಕಾರರು ಉಪಸ್ಥಿತರಿದ್ದರು. ಪಲಕನಮರಡಿಯಲ್ಲಿ ಹನುಮಂತ ಗುರಿಕಾರ, ನಿಂಗಪ್ಪ, ಚನ್ನಪ್ಪ, ಮರಿಯಮ್ಮ, ಹನುಮಂತಿ ಸೇರಿದಂತೆ ಇತರರು ಭಾಗವಹಿಸಿದ್ದರು.

# ಗ್ಯಾಸ್ ಏಜೆನ್ಸಿ ವಿತರಕರ ಅರ್ಜಿ ಕರೆಯುವಂತೆ ಆಗ್ರಹಿಸಿ ಮನವಿ




❏ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದಲ್ಲಿ ಅಡುಗೆ ಅನೀಲ ವಿತರಕರು ಇಲ್ಲದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಸಮಸ್ಯೆ ಪರಿಹಾರಕ್ಕೆ ಆದಷ್ಟು ಬೇಗ ವಿತರಕರಿಗಾಗಿ ಅರ್ಜಿ ಕರೆಯಲು ಕ್ರಮ ವಹಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ಧ್ವನಿ (ಚಂದ್ರಕಾಂತ್ ಎಸ್ ಕಾದ್ರೊಳ್ಳಿ ಬಣ) ಪದಾಧಿಕಾರಿಗಳು ತಹಸಿಲ್ದಾರ್ ಡಾ.ವಿನಯಾ ಹೂಗಾರ ಇವರಿಗೆ ಗುರುವಾರ ಮನವಿ ಸಲ್ಲಿಸಿದರು.**

ಮನವಿ ಪತ್ರದಲ್ಲಿ ತಾಳಿಕೋಟಿ ಪಟ್ಟಣದಲ್ಲಿ ಅಡುಗೆ ಅನೀಲ ವಿತರಕರು ಇಲ್ಲದೆ ಇರುವ ಕಾರಣ ತಾಲೂಕಿನ ಕಲಕೇರಿ ಗ್ರಾಮೀಣ ವಿತರಕರಿಂದ ಅಡುಗೆ ಅನೀಲವನ್ನು ವಿತರಿಸಲಾಗುತ್ತಿದ್ದು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಗ್ರಾಮೀಣ ಪ್ರದೇಶದ ಜೊತೆಗೆ ನಗರ ಪ್ರದೇಶಕ್ಕೂ ವಿತರಣೆ ಮಾಡುತ್ತಿರುವುದರಿಂದ ಸಮಯಕ್ಕೆ ಸರಿಯಾಗಿ ವಿತರಣೆ ಮಾಡಲಾಗುತ್ತಿಲ್ಲ ಜೊತೆಗೆ ಹೆಚ್ಚುವರೆ ಹಣವನ್ನು ವಸೂಲಿ ಮಾಡಲಾಗುತ್ತಿದೆ ಎಂದು ಆರೋಪಿಸಲಾಗಿದೆ.

ಗ್ಯಾಸ್ ಬುಕಿಂಗ್, ವಿತರಣೆಯಲ್ಲಿ ಹಾಗೂ ತುರ್ತು ಅವಶ್ಯಕತೆ ಸಂದರ್ಭದಲ್ಲಿ ಸಾರ್ವಜನಿಕರು ತುಂಬಾ ತೊಂದರೆಯನ್ನು ಅನುಭವಿಸುವಂಥಾಗಿದೆ ಆದಕಾರಣ ಆದಷ್ಟು ಬೇಗ ಈ ಸಮಸ್ಯೆಗೆ ಪರಿಹಾರವನ್ನು ಕಲ್ಪಿಸಲು ಕ್ರಮವಿಸಬೇಕು ಜೊತೆಗೆ ಈಗಿರುವ ಗ್ರಾಮೀಣ ಭಾಗದ ವಿತರಕರು ಸರಿಯಾಗಿ ವಿತರಣೆ ಮಾಡಲು ಹಾಗೂ ಹೆಚ್ಚುವರಿ ಹಣ ವಸೂಲಿ ಮಾಡುವುದರ ಮೇಲೆ ಕಠಿಣ ಕ್ರಮ ಜರುಗಿಸಬೇಕು ಎಂದು ತಿಳಿಸಲಾಗಿದೆ. ಸಮಿತಿಯ ತಾಲೂಕ ಅಧ್ಯಕ್ಷ ರಮೇಶ ದೊಡಮನಿ ಸಾಸನೂರ, ಪ್ರಧಾನ ಕಾರ್ಯದರ್ಶಿ ಬಸವರಾಜ ತೋಟದ ತಮದಡ್ಡಿ, ಕಾರ್ಯದರ್ಶಿ ಶಂಕ್ರಪ್ಪ ದೊಡಮನಿ ಸಾಸನೂರ, ಶೇಕಪ್ಪ ಕಟ್ಟಿಮನಿ ಕಾರಗನೂರ, ಮಲ್ಲಪ್ಪ ಶಿರೋಳ ತಾಳಿಕೋಟಿ, ಅಂಬೇಡ್ಕರ್ ಸೇನೆ ಜಿಲ್ಲಾ ಉಪಾಧ್ಯಕ್ಷ ಬಸ್ಸು ಕಟ್ಟಿಮನಿ, ತಾಲೂಕ ಅಧ್ಯಕ್ಷ ಗೋಪಾಲ ಕಟ್ಟಿಮನಿ, ಶೇಖಪ್ಪ ಮಾದರ ಇದ್ದರು.

# ಸನ್ ರೈಸ್ ಕಾಲೇಜಿನ ಶನಿವಾರದ ವಿಶೇಷ ಉಪನ್ಯಾಸ ನೀಡಿದ ಡಾ.ಶೃತಿ.ಎಂ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜುಗಳ ವತಿಯಿಂದ ಪ್ರತೀ ಶನಿವಾರದಂತೆ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ದಿನಾಂಕ 16 ಮೇ ಶನಿವಾರ ನಡೆದ ಈ ಕಾರ್ಯಕ್ರಮದಲ್ಲಿ ಸಿಂಧನೂರಿನ ಆದರ್ಶ ಆಸ್ಪತ್ರೆಯ ಮಕ್ಕಳ ತಜ್ಞರಾದ ಡಾ. ಶ್ರುತಿ.**

ಎಂ (MBBS, DCH, FINNF Pediatrician & Neonatologist) ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಮಾಹಿತಿ ನೀಡಿದರು.ಈ ಸಂದರ್ಭದಲ್ಲಿ ಅವರು "ಶಿಶುಗಳು ಮತ್ತು ವಯಸ್ಕರ ಉನ್ನತ ಜೀವಾಧಾರ ಹಾಗೂ ಮೂಲಭೂತ ಜೀವಾಧಾರ" ವಿಷಯದ ಕುರಿತು ಸಮಗ್ರವಾಗಿ ಉಪನ್ಯಾಸ ನೀಡಿದರು. ತುರ್ತು ಪರಿಸ್ಥಿತಿಗಳಲ್ಲಿ ರೋಗಿಗಳ ಜೀವ ಉಳಿಸುವಲ್ಲಿ ಬಿಎಲ್‌ಎಸ್ (Basic Life Support) ಮತ್ತು ಎಎಲ್‌ಎಸ್ (Advanced Life Support) ತಂತ್ರಗಳ ಮಹತ್ವವನ್ನು ವಿವರಿಸಿ, ನರ್ಸಿಂಗ್ ವಿದ್ಯಾರ್ಥಿಗಳು ಪ್ರಾಯೋಗಿಕ ಜ್ಞಾನವನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯ ಎಂದು ತಿಳಿಸಿದರು. ಶಿಶುಗಳು ಹಾಗೂ ವಯಸ್ಕರಿಗೆ ತುರ್ತು ಸಂದರ್ಭದಲ್ಲಿ ನೀಡಬೇಕಾದ ಪ್ರಾಥಮಿಕ ಚಿಕಿತ್ಸೆ, ಸಿಪಿಆರ್ ತಂತ್ರಗಳು, ತುರ್ತು ಸೇವೆಗಳ ಜವಾಬ್ದಾರಿ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ನರ್ಸಿಂಗ್ ವೃತ್ತಿಯ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.ಡಾ. ಶ್ರುತಿ ಅವರು ಮಾತನಾಡಿ,



ನರ್ಸಿಂಗ್ ಕ್ಷೇತ್ರವು ಕೇವಲ ಉದ್ಯೋಗವಲ್ಲ, ಅದು ಮಾನವೀಯ ಸೇವೆಯ ಪ್ರತೀಕವಾಗಿದೆ. ವಿದ್ಯಾರ್ಥಿಗಳು ಶಿಸ್ತು, ಆತ್ಮವಿಶ್ವಾಸ ಮತ್ತು ಸೇವಾಭಾವವನ್ನು ಬೆಳೆಸಿಕೊಂಡರೆ ಆರೋಗ್ಯ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯ ಎಂದು ಹೇಳಿದರು. ಅವರ ಪ್ರೇರಣಾದಾಯಕ ಮಾತುಗಳು ವಿದ್ಯಾರ್ಥಿಗಳಲ್ಲಿ ಹೊಸ ಉತ್ಸಾಹ ಮತ್ತು ಆತ್ಮವಿಶ್ವಾಸ ತುಂಬಿದವು. ಈ ಸಂದರ್ಭದಲ್ಲಿ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಆಸಿಫ್ ಅವರು ಮಾತನಾಡಿ, ನಮ್ಮ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾದ ಉಪನ್ಯಾಸ ನೀಡಿದ ಡಾ. ಶ್ರುತಿ ಮೇಡಂ ಅವರಿಗೆ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ಎಲ್ಲಾ ಪ್ರಾಚಾರ್ಯರು ಹಾಗೂ ಉಪನ್ಯಾಸಕರ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದರು. ಇಂತಹ ಉಪನ್ಯಾಸಗಳು ವಿದ್ಯಾರ್ಥಿಗಳ ಜ್ಞಾನ ವೃದ್ಧಿಗೆ ಮತ್ತು ಭವಿಷ್ಯದ ವೃತ್ತಿ ಜೀವನಕ್ಕೆ ಬಹಳ ಸಹಕಾರಿಯಾಗುತ್ತವೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದು ಉಪನ್ಯಾಸದ ಸದುಪಯೋಗ ಪಡೆದುಕೊಂಡರು.






# "ವಿಜಯನಗರ ಸಾಮ್ರಾಜ್ಯದ ವೈಭವಕ್ಕೆ ಹೊಸ ಸಾಕ್ಷಿ: ಹಂಪಿಯಲ್ಲಿ ಶತಮಾನಗಳಷ್ಟು ಹಳೆಯ ದೇವಾಲಯದ ಮೇಲ್ಛಾವಣಿ ಪತ್ತೆ"

❏ ನೈಜ್ಯ ದೆಸೆ ನ್ಯೂಸ್

**ಹಂಪಿ: ವಿಜಯನಗರ ಸಾಮ್ರಾಜ್ಯದ ಐತಿಹಾಸಿಕ ವೈಭವವನ್ನು ಮತ್ತೊಮ್ಮೆ ಅನಾವರಣಗೊಳಿಸುವ ಮಹತ್ವದ ಪುರಾತತ್ವ ಶೋಧನೆ ಹಂಪಿಯಲ್ಲಿ ಬೆಳಕಿಗೆ ಬಂದಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಹಂಪಿ ವಲಯದ ಅಧಿಕಾರಿಗಳು ಐತಿಹಾಸಿಕ ಜೈನ ದೇವಾಲಯ ಸಮುಚ್ಚಯದ ಸಮೀಪ ನಡೆಸಿದ ಉತ್ಖನನ ಕಾರ್ಯದ ವೇಳೆ ವಿಜಯನಗರ ಕಾಲಘಟ್ಟದ ಪುರಾತನ ದೇವಾಲಯದ ಮೇಲ್ಛಾವಣಿಯನ್ನು ಪತ್ತೆ ಹಚ್ಚಿದ್ದಾರೆ.**

ಜೈನ ದೇವಾಲಯ ಸಮುಚ್ಚಯದ ಸುತ್ತಮುತ್ತಲಿನ ಪ್ರದೇಶದಲ್ಲಿ ವಿಜಯನಗರ ಯುಗಕ್ಕೆ ಸೇರಿದ ಹಲವು ನಿರ್ಮಿತಿಗಳು ಮಣ್ಣಿನಡಿ ಹೂತು ಹೋಗಿರಬಹುದೆಂಬ ಶಂಕೆಯ ಹಿನ್ನೆಲೆ ಈ ತಂಡವು ಸಮಗ್ರ ಪುರಾತತ್ವ ಉತ್ಖನನ ಕಾರ್ಯ ಆರಂಭಿಸಿತ್ತು. ಈ ವೇಳೆ ಮಣ್ಣಿನ ಪದರಗಳ ಕೆಳಗೆ ಕಲ್ಲಿನಿಂದ ನಿರ್ಮಿತ ದೇವಾಲಯದ ಮೇಲ್ಛಾವಣಿ ಪತ್ತೆಯಾಗಿದ್ದು, ಇದು ಶತಮಾನಗಳಷ್ಟು ಹಳೆಯ ದೇವಾಲಯವಾಗಿರಬಹುದು



ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿದ ಇಲಾಖೆಯ ಹಂಪಿ ವಲಯದ ಅಧೀಕ್ಷಕ ಪುರಾತತ್ವ ವಿಜ್ಞಾನಿ ಕೆ. ರಾಮಕೃಷ್ಣ ರೆಡ್ಡಿ ಅವರಪು, ಪತ್ತೆಯಾದ ರಚನೆಯ ಉದ್ದ ಸುಮಾರು 4.35 ಮೀಟರ್ ಹಾಗೂ ಅಗಲ 4.26 ಮೀಟರ್ ಇದೆ ಎಂದು ತಿಳಿಸಿದ್ದಾರೆ.

ಪ್ರಾಥಮಿಕ ಪರಿಶೀಲನೆ ಪ್ರಕಾರ ದೇವಾಲಯದ ಇಟ್ಟಿಗೆಯಿಂದ ನಿರ್ಮಿತವಾಗಿರುವ ಗರ್ಭಗುಡಿ ಕಾಲಕ್ರಮೇಣ ಭಾರೀ ಹಾನಿಗೊಳಗಾಗಿದ್ದು, ಇದೀಗ ಗರ್ಭಗುಡಿಯ ಮೇಲ್ಛಾವಣಿ ಮಾತ್ರ ಪತ್ತೆಯಾಗಿದೆ ಎಂದು ಹೇಳಿದ್ದಾರೆ. ದೇವಾಲಯದ ಗೋಡೆಗಳು ಅಥವಾ ಇತರೆ ಭಾಗಗಳು ಇನ್ನೂ ಮಣ್ಣಿನಡಿ ಸುರಕ್ಷಿತವಾಗಿ ಇರಬಹುದಾದ ಸಾಧ್ಯತೆ ಇದೆ. ಅವುಗಳ ಎತ್ತರ ಸುಮಾರು 10 ಅಡಿ ಇರಬಹುದು ಎಂದು ಅಂದಾಜಿಸಲಾಗಿದೆ. ಮುಂದಿನ ಉತ್ಖನನ ಕಾರ್ಯದಿಂದ ದೇವಾಲಯದ ಸಂಪೂರ್ಣ ವಿನ್ಯಾಸ ಹಾಗೂ ಇತರ ಸಂಬಂಧಿತ ರಚನೆಗಳು ಪತ್ತೆಯಾಗುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ. ಈ ಆವಿಷ್ಕಾರವು ಹಂಪಿಯಲ್ಲಿರುವ ಜೈನ ವಸಾಹತುವಿನ ಧಾರ್ಮಿಕ ಮತ್ತು ವಾಸ್ತುಶಿಲ್ಪದ ಭೂದೃಶ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಹಂಪಿಯ ಜೈನ ಪ್ರದೇಶದಲ್ಲಿ ಇದು ಒಂದು ಪ್ರಮುಖ ಆವಿಷ್ಕಾರವಾಗಿದ್ದು, ಮಣ್ಣಿನಡಿ ಇನ್ನೂ ಸಮಗ್ರ ವಾಸ್ತುಶಿಲ್ಪ ಅಂಶಗಳು ಉಳಿದಿರುವ ದೇವಾಲಯದ ಅಸ್ತಿತ್ವವನ್ನು ಇದು ಸೂಚಿಸುತ್ತದೆ.

ಶಿಖರ ಭಾಗ ಹಾನಿಗೊಳಗಾಗಿದ್ದರೂ ಗರ್ಭಗುಡಿಯ ಮೇಲ್ಛಾವಣಿ ಸ್ಪಷ್ಟವಾಗಿ ಕಾಣಿಸುತ್ತಿದೆ. ಮುಂದಿನ ಉತ್ಖನನದಲ್ಲಿ ಗೋಡೆಗಳು ಹಾಗೂ ಇತರ ನಿರ್ಮಿತಿಗಳೂ ಪತ್ತೆಯಾಗಬಹುದು ಎಂದು ರಾಮಕೃಷ್ಣ ರೆಡ್ಡಿ ತಿಳಿಸಿದ್ದಾರೆ. ದೇವಾಲಯದ ಅವಶೇಷಗಳಿಗೆ ಯಾವುದೇ ಹಾನಿಯಾಗದಂತೆ ಉತ್ಖನನದ ಜೊತೆಗೆ ದಾಖಲೆ ಸಂಗ್ರಹ ನಕ್ಷೆ ತಯಾರಿ ಹಾಗೂ ಸಂರಕ್ಷಣಾ ಕಾರ್ಯಗಳನ್ನು ಕೂಡ ಸಮಕಾಲೀನವಾಗಿ ಕೈಗೊಳ್ಳಲಾಗಿದೆ ಎಂದು ಎಎಸ್‌ಐ ಅಧಿಕಾರಿಗಳು ತಿಳಿಸಿದ್ದಾರೆ. ಈ ಕಾರ್ಯಕ್ಕೆ ರಾಜ್ಯ ಪ್ರವಾಸಿ ಮಾರ್ಗದರ್ಶಕರ ಸಂಘದ ಕಾರ್ಯದರ್ಶಿ ವಿರೂಪಾಕ್ಷಿ ವಿ ಹಂಪಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇಂತಹ ಸಂಶೋಧನೆಗಳು ವಿಜಯನಗರ ಕಾಲಘಟ್ಟದಲ್ಲಿ ಹಂಪಿಯಲ್ಲಿ ಅಸ್ತಿತ್ವದಲ್ಲಿದ್ದ ಸಾಂಸ್ಕೃತಿಕ ಮತ್ತು ಧಾರ್ಮಿಕ ವೈವಿಧ್ಯತೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ ಎಂದು ಹೇಳಿದ್ದಾರೆ. ವಿಶ್ವ ಪಾರಂಪರಿಕ ತಾಣವಾಗಿರುವ ಹಂಪಿ ಈಗಾಗಲೇ ತನ್ನ ಅದ್ಭುತ ಶಿಲ್ಪಕಲೆ, ದೇವಾಲಯಗಳು ಮತ್ತು ಐತಿಹಾಸಿಕ ಸ್ಮಾರಕಗಳಿಗಾಗಿ ಜಗತ್ತಿನಾದ್ಯಂತ ಪ್ರಸಿದ್ಧವಾಗಿದೆ. ಇದೀಗ ಪತ್ತೆಯಾದ ಈ ಪುರಾತನ ದೇವಾಲಯವು ವಿಜಯನಗರ ಸಾಮ್ರಾಜ್ಯದ ಇತಿಹಾಸ ಅಧ್ಯಯನಕ್ಕೆ ಮತ್ತೊಂದು ಅಮೂಲ್ಯ ಸೇರ್ಪಡೆಯಾಗಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101